
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ರೂ. 28/- ಕನ್ನಡ-ಇಂಗ್ಲೀಷ್ ಮಾಸಿಕ

ಸಂಪುಟ-04 • ಸಂಚಿಕೆ-11 • ಏಪ್ರಿಲ್ 2023



ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನತೆಯಾದ ನಾವು ಭಾರತವನ್ನು
ಸಾರ್ವಭೌಮ ಸಮಾಜವಾದಿ
ಮತಧರ್ಮ ನಿರಪೇಕ್ಷ ಜನತಂತ್ರಾತ್ಮಕ
ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ
ಭಾರತದ ಎಲ್ಲ ನಾಗರಿಕರಿಗೆ
ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯ
ಸ್ಥಾನಮಾನ, ಅವಕಾಶಗಳ ಸಮತೆ
ದೊರೆಯುವಂತೆ ಮಾಡುವ,
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ
ಎಲ್ಲರಲ್ಲಿ ಭ್ರಾತೃತ್ವ ಭಾವನೆ ಮೂಡಿಸುವ
ದೃಢ ಸಂಕಲ್ಪ ಮಾಡಿ
ನಮ್ಮ ಸಂವಿಧಾನ ಸಭೆಯಲ್ಲಿ
1949ರ ನವೆಂಬರ್ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ
ಅರ್ಪಿಸಿಕೊಂಡು ಅಂಗೀಕರಿಸಿ, ಶಾಸನವಾಗಿ
ವಿಧಿಸಿಕೊಂಡಿದ್ದೇವೆ

ರೂ. 28/- BAPU PRAPANCHA
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-04 • ಸಂಚಿಕೆ-11 • ಏಪ್ರಿಲ್ 2023

ಹಿಂಬದಿಯ ರಕ್ಷಾಪುಟದ ಚಿತ್ರ : ಎಂ ಎಸ್ ಮೂರ್ತಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಇಂದಿರಾ ಕೃಷ್ಣಪ್ಪ

Editor :
Indira Krishnappa

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
CreativeGeekZ
Yadhava College Road,
Madhavanagara, Bengaluru - 560001
Ph : +91 80 40927049
E-mail : mail@creativegeekz.com

Design : **Ujwal Creations,** Bangalore



ಗಾಂಧೀಜಿ ಮತ್ತು ಅಂಬೇಡ್ಕರ್

ಮೂಲ ಲೇಖನ :
ಸುಧೀಂದ್ರ ಕುಲಕರ್ಣಿ

ಕನ್ನಡಕ್ಕೆ: ಹಮೀದ್ ಕೆ.

ಮಹಾತ್ಮ ಗಾಂಧಿ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಿನ್ನ ಗುರಿಗಳನ್ನು ಹೊಂದಿದ್ದರು ಎಂಬ ತಪ್ಪು ಗ್ರಹಿಕೆಯನ್ನು ಪಸರಿಸುವ ಪ್ರಯತ್ನ ನಡೆಯುತ್ತಿರುವುದು ಖೇದಕರ.


ಹರಿಜನ ಅಥವಾ ದಲಿತ? ಗಾಂಧೀಜಿ ಅಥವಾ ಅಂಬೇಡ್ಕರ್? ಮಹಾತ್ಮ ಗಾಂಧಿ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಿನ್ನ ಗುರಿಗಳನ್ನು ಹೊಂದಿದ್ದರು ಎಂಬ ತಪ್ಪು ಗ್ರಹಿಕೆಯನ್ನು ಪಸರಿಸುವ ಪ್ರಯತ್ನ ನಡೆಯುತ್ತಿರುವುದು ಖೇದಕರ. ಗಾಂಧೀಜಿ ಅವರು ದಲಿತರ ಶತ್ರು ಎಂದು ಕೂಡ ಕೆಲವು ಶಕ್ತಿಗಳು ಬಿಂಬಿಸಿವೆ. 'ಅಸ್ಪೃಶ್ಯರು' ಕೂಡ 'ದೇವರ ಮಕ್ಕಳು' ಎಂಬ ತಮ್ಮ ಪರಿಕಲ್ಪನೆಯನ್ನು 'ಹರಿಜನ' ಪದವನ್ನು ಜನಪ್ರಿಯಗೊಳಿಸುವ ಮೂಲಕ ಜನರಿಗೆ ತಲುಪಿಸಲು ಗಾಂಧೀಜಿ ಪ್ರಯತ್ನಿಸಿದ್ದರು. ಆದರೆ, ಅವರ ಟೀಕಾಕಾರರು ಈ ಪದಕ್ಕೆ ಕಳಂಕ ಅಂಟಿಕೊಳ್ಳುವಂತೆ ವ್ಯವಸ್ಥಿತವಾಗಿ ಮಾಡಿದರು. 'ಹರಿಜನ' ಎಂಬ ಪದವೇ ಅವಮಾನಕಾರಿ ಎಂದು ವಾದಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಮಹತ್ವದ ವಿದ್ಯಮಾನವೊಂದನ್ನು ಈ ಪರಿಪ್ರೇಕ್ಷ್ಯದಲ್ಲಿ ಇರಿಸಿ ನೋಡುವುದು ಉಪಯುಕ್ತ. ಗಾಂಧೀಜಿಯ ಪ್ರತಿನಿಧಿಯಾಗಿ ಮದನ

ಮೋಹನ ಮಾಳವೀಯ ('ಪ್ರಬಲ ಜಾತಿ' ಹಿಂದೂಗಳ ಪರವಾಗಿ) ಮತ್ತು ದಮನಿತ ವರ್ಗಗಳ (ದಲಿತ ಎಂಬ ಪದ ಆಗ ಚಾಲ್ತಿಯಲ್ಲಿ ಇರಲಿಲ್ಲ) ಪರವಾಗಿ ಡಾ. ಅಂಬೇಡ್ಕರ್ ಅವರು ಸಹಿ ಮಾಡಿದ್ದ 'ಪೂನಾ ಒಪ್ಪಂದ'ಕ್ಕೆ (ಸೆಪ್ಟೆಂಬರ್ 24) ಈಗ 90 ವರ್ಷ ತುಂಬಿದೆ. ಮಹಾತ್ಮ ಗಾಂಧಿ ಅವರು ಉನ್ನತ ಧ್ಯೇಯ ಇರಿಸಿಕೊಂಡಿದ್ದ 'ಹರಿಜನ ಸೇವಕ ಸಂಘ'ವನ್ನು ಅದೇ ದಿನ ಸ್ಥಾಪಿಸಿದರು: ಅಸ್ಪೃಶ್ಯತೆಯ ಶಾಪವನ್ನು ನಿರ್ಮೂಲನಗೊಳಿಸಿ ಜಾತಿ, ಮತ, ಜನಾಂಗ, ಮತ್ತು ಲಿಂಗದ ಆಧಾರದಲ್ಲಿ ಯಾವುದೇ ರೀತಿಯ ಅನ್ಯಾಯ, ಅಪಮಾನ ಮತ್ತು ತಾರತಮ್ಯ ಇಲ್ಲದ ಸಮಾಜ ನಿರ್ಮಾಣವೇ ಆ ಧ್ಯೇಯವಾಗಿತ್ತು. ಈ ಎಲ್ಲ ಅನಿಷ್ಟಗಳಿಂದ ಸಮಾಜವು ಮುಕ್ತವಾಗದೇ ಇದ್ದರೆ ಒಗ್ಗಟ್ಟು, ಶಾಂತಿ, ಸಾಮರಸ್ಯ ಮತ್ತು ಖಚಿತ ಪ್ರಗತಿ ಸಾಧ್ಯವಿಲ್ಲ ಎಂಬುದು ಗಾಂಧೀಜಿಗೆ ಮನದಟ್ಟಾಗಿತ್ತು.

ಈ ಒಪ್ಪಂದದ ಮಹತ್ವ ಅರ್ಥವಾಗಬೇಕಾದರೆ ಅದರ ಹಿನ್ನೆಲೆಯನ್ನು ನೆನಪಿಸಿಕೊಳ್ಳುವುದು ಅಗತ್ಯ. ಬ್ರಿಟಿಷ್ ಸರ್ಕಾರವು ದಮನಿತ ಜಾತಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು 1931ರ ನವೆಂಬರ್‌ನಲ್ಲಿ ನಿರ್ಧರಿಸಿತು. ಈ ಯೋಜನೆಯ ಪ್ರಕಾರ, ಪ್ರಾದೇಶಿಕ ಶಾಸನ ಸಭೆಗಳಿಗೆ ದಲಿತರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಲು ಅವಕಾಶ ಇತ್ತು. ಇದೇ ರೀತಿಯ ಅವಕಾಶವನ್ನು ಮುಸ್ಲಿಮರಿಗೂ ನೀಡಲಾಗಿತ್ತು. ಜಾತಿ ಅಥವಾ ಧರ್ಮದ ಪರಿಗಣನೆ ಇಲ್ಲದೆ ಎಲ್ಲರನ್ನೂ ಒಳಗೊಂಡ ಚುನಾವಣಾ ವ್ಯವಸ್ಥೆ ಪರವಾದ ಒಲವನ್ನು ಮೊದಲು ತೋರಿದ್ದರೂ ಬಳಿಕ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎಂಬ ಬೇಡಿಕೆಯನ್ನು ಅಂಬೇಡ್ಕರ್ ಮುಂದಿಟ್ಟಿದ್ದರು. ಆ ಸಂದರ್ಭದಲ್ಲಿ ಗಾಂಧೀಜಿ ಅವರನ್ನು ಬ್ರಿಟಿಷರು ಪುಣೆಯ ಯೆರವಡಾ ಜೈಲಿನಲ್ಲಿ ಇರಿಸಿದ್ದರು. ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಗಾಂಧೀಜಿ ಅವರು ದೃಢವಾಗಿ ವಿರೋಧಿಸಿದ್ದರು. ಹಿಂದೂ ಸಮಾಜವನ್ನು ವಿಭಜಿಸುವುದಕ್ಕಾಗಿ ವಸಾಹತುಶಾಹಿ ಆಡಳಿತಗಾರರ ಸಂಚು ಇದು ಎಂದು ಗಾಂಧೀಜಿ ಹೇಳಿದ್ದರು. 1932ರ ಸೆಪ್ಟೆಂಬರ್ 20ರಂದು ಅವರು ಆಮರಣಾಂತ ಉಪವಾಸ ಕೈಗೊಂಡರು. ಗಾಂಧೀಜಿಯವರ ಜೀವ ಉಳಿಸುವುದಕ್ಕಾಗಿ ಸಾರ್ವಜನಿಕವಾಗಿ ವ್ಯಕ್ತವಾದ ಗಂಭೀರ ಕಾಳಜಿಗೆ ಸ್ಪಂದಿಸಿದ ಅಂಬೇಡ್ಕರ್ ತಮ್ಮ ನಿಲುವಿನಿಂದ ಹಿಂದೆ ಸರಿದರು. ಅದರ ಪ್ರಕಾರ, ಪೂನಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಬ್ರಿಟಿಷರು ತಮ್ಮ ನಿರ್ಧಾರವನ್ನು ಕೈಬಿಟ್ಟರು ಮತ್ತು ಗಾಂಧೀಜಿ ಉಪವಾಸ ಕೊನೆಗೊಳಿಸಿದರು. ಪರಿಶಿಷ್ಟ ಜಾತಿಗಳ ಜನರಿಗೆ ಈ ಒಪ್ಪಂದವು ಪ್ರಮುಖ ಪ್ರಯೋಜನವೊಂದನ್ನು ಕೊಟ್ಟಿತು. ಸಾಮಾನ್ಯ ಪ್ರಾತಿನಿಧ್ಯ ವ್ಯವಸ್ಥೆ ಅಡಿಯಲ್ಲಿ ಇದ್ದ ಮೀಸಲು ಕ್ಷೇತ್ರಗಳ ಸಂಖ್ಯೆಯನ್ನು 96ರಿಂದ 148ಕ್ಕೆ ಹೆಚ್ಚಿಸಲಾಯಿತು.

ಈ ಒಪ್ಪಂದದೊಂದಿಗೆ ಗಾಂಧೀಜಿ ತಮ್ಮ ಕೆಲಸಗಳನ್ನು ನಿಲ್ಲಿಸಲಿಲ್ಲ, ದಲಿತರಿಗೆ ಸಮಾನತೆ ಮತ್ತು ನ್ಯಾಯ ದೊರಕಿಸುವ ಪ್ರಯತ್ನಗಳನ್ನು ಇನ್ನಷ್ಟು ತೀವ್ರಗೊಳಿಸಿದರು. 'ಆತ್ಮ ಶುದ್ಧೀಕರಣ'ಕ್ಕಾಗಿ ಮತ್ತು ಅಸ್ಪೃಶ್ಯತೆಯ ಪದ್ಧತಿ ಮುಂದುವರಿದಿರುವುದಕ್ಕೆ ತಮ್ಮ ಗಾಢ ವೇದನೆಯನ್ನು ತೋರಿಸುವುದಕ್ಕಾಗಿ 1933ರ ಮೇಯಲ್ಲಿ ಗಾಂಧೀಜಿ ಅವರು ಯೆರವಡಾ ಜೈಲಿನಲ್ಲಿಯೇ 21 ದಿನಗಳ ಉಪವಾಸ ಆರಂಭಿಸಿದರು. ಅದೇ ವರ್ಷ ನವೆಂಬರ್‌ನಲ್ಲಿ ದೇಶವ್ಯಾಪಿಯಾದ ಒಂಬತ್ತು ತಿಂಗಳ 'ಹರಿಜನ ಯಾತ್ರೆ'ಯನ್ನು ಆರಂಭಿಸಿದರು. ಅದಲ್ಲದೆ, 'ಪ್ರಭಾವಿ ಜಾತಿ'ಗಳ ಹಿಂದೂಗಳು ಅಸ್ಪೃಶ್ಯತೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು ಮತ್ತು ಎಲ್ಲ ದೇವಾಲಯಗಳನ್ನು ದಲಿತರಿಗೆ ತೆರೆದಿಡಬೇಕು ಎಂದು ಆಗ್ರಹಿಸಿದರು. ಅಸ್ಪೃಶ್ಯತೆಯು 'ಹಿಂದೂ ಧರ್ಮದ ಮೇಲೆ ಕರಿ ಚುಕ್ಕೆ' ಎಂದು ಟೀಕಿಸಿದ ಅವರು 'ಅಸ್ಪೃಶ್ಯತೆ ಇರುವುದಕ್ಕಿಂತ ಹಿಂದೂ ಧರ್ಮವೇ ಸಾಯುವುದು ಮೇಲು ಎಂದು ಭಾವಿಸುವೆ' ಎಂದು ಘೋಷಿಸಿದರು. 'ನಾಯಿಯೊಂದು ಕೆರೆಯಿಂದ ನೀರು ಕುಡಿಯಬಹುದು, ಆದರೆ ಬಾಯಾರಿದ





ದಮನಿತವರ್ಗದ ಬಾಲಕನೊಬ್ಬ ಕುಡಿಯಲು ಸಾಧ್ಯವಾಗದು. ಒಂದು ವೇಳೆ ಆತ ಅಲ್ಲಿಗೆ ಹೋದರೆ ಹೊಡೆತ ತಿನ್ನದೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಇಂದು ಆಚರಣೆಯಲ್ಲಿರುವ ಅಸ್ಪೃಶ್ಯತೆಯು ಮನುಷ್ಯನನ್ನು ನಾಯಿಗಿಂತ ಕಡೆಯಾಗಿ ನೋಡುತ್ತದೆ' ಎಂದು ತಮ್ಮ ಆಕ್ರೋಶವನ್ನು ಗಾಂಧೀಜಿ ವ್ಯಕ್ತಪಡಿಸಿದ್ದರು.

ಗಾಂಧೀಜಿಯವರ 'ಹರಿಜನ' ಅಭಿಯಾನವು ಹಿಂದೂ ಸಮಾಜದ ಮೇಲೆ ಬಹುದೊಡ್ಡ ಪರಿಣಾಮ ಬೀರಿತ್ತು. ಹಲವು ಹಿಂದೂ ದೇವಾಲಯಗಳು ದಲಿತರಿಗೆ ಪ್ರವೇಶ ನೀಡಿದವು. ಸಾರ್ವಜನಿಕ ಬಾವಿಗಳನ್ನು ಬಳಸಲು ದಲಿತರಿಗೂ ಅವಕಾಶ ಕೊಡಬೇಕು ಎಂದು ಜನರಿಗೆ ಹೇಳಲು ಗಾಂಧೀಜಿಯ ಅನುಯಾಯಿಗಳು ಹಳ್ಳಿಗಳಿಗೆ ಹೋದರು. ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಸ್ವತಃ ಉದಾಹರಣೆಗಳಾಗಲು ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಲಾಯಿತು. ಇಲ್ಲೊಂದು ಗಮನಾರ್ಹ ಉದಾಹರಣೆ ಇದೆ. ಗಾಂಧೀಜಿ ಅವರು ಯೆರವಡಾ ಸೆರೆಮನೆಯಲ್ಲಿ ಇದ್ದಾಗ ಅವರನ್ನು ನೋಡಲು ಜವಾಹರಲಾಲ್ ನೆಹರೂ ಅವರ ಹೆಂಡತಿ ಕಮಲಾ ಮತ್ತು ತಾಯಿ ಸ್ವರೂಪ ರಾಣಿ ಅವರು ಬಂದರು. ಸ್ವರೂಪ ರಾಣಿ ಅವರು ಅತ್ಯಂತ ಸಂಪ್ರದಾಯಸ್ಥ ಹಿಂದೂ ಮಹಿಳೆ. ಅವರು ಮನೆಯಲ್ಲಿ ತಮಗಾಗಿ ಪ್ರತ್ಯೇಕ, ಸಾಂಪ್ರದಾಯಿಕ ಅಡುಗೆಮನೆ ಹೊಂದಿದ್ದರು. ಅಲಹಾಬಾದ್ನಿಂದ ಹೊರಡುವ ಮುನ್ನ 'ಅಸ್ಪೃಶ್ಯ'ರ ಕೈಯಿಂದ ಪ್ರಸಾದ ಸ್ವೀಕರಿಸಿದೆ ಎಂದು ಅವರು ಗಾಂಧೀಜಿಗೆ ಹೇಳಿದರು.

ಪೂನಾ ಕರಾರಿನ ಮೇಲೆ ಆಪಾದನೆ ತಪ್ಪು: ಮೂರು ಕಾರಣಗಳು: ಒಂಬತ್ತು ದಶಕಗಳ ಹಿಂದೆ 'ಪೂನಾ ಒಪ್ಪಂದ'ಕ್ಕೆ ಸಹಿ ಹಾಕಿದ ಬಳಿಕ ಭಾರತದಲ್ಲಿ ಹಲವು ಮಹತ್ವಪೂರ್ಣವಾದ ಬದಲಾವಣೆಗಳು ಆಗಿವೆ. ಮುಖ್ಯವಾಗಿ ಗಾಂಧೀಜಿಯ ನೇತೃತ್ವದಲ್ಲಿ ನಡೆದ ಸುದೀರ್ಘ ಹೋರಾಟದ ಬಳಿಕ ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಸಿಕ್ಕಿದೆ. ಪ್ರಬುದ್ಧವಾದ ಸಂವಿಧಾನವನ್ನು 1950ರಲ್ಲಿ ದೇಶವು ಅಳವಡಿಸಿಕೊಂಡಿದೆ. ಬ್ರಿಟಿಷರು ನೀಡಿದ್ದ ಪ್ರತ್ಯೇಕ ಪ್ರಾತಿನಿಧ್ಯದ ಅವಕಾಶವನ್ನು ಅಂಬೇಡ್ಕರ್ ಅವರಿಗೆ ಮನಸ್ಸಿಲ್ಲದಿದ್ದರೂ ಕೈಬಿಡುವಂತೆ ಬಲವಂತ ಮಾಡಿ ಆ ಸಮುದಾಯಕ್ಕೆ ಗಾಂಧೀಜಿ ಬಹುದೊಡ್ಡ ಅನ್ಯಾಯ ಮಾಡಿದ್ದಾರೆ ಎಂದು ಕರ್ನಾಟಕ



ಮತ್ತು ಬೇರೆಡೆಯಲ್ಲಿರುವ ಅಂಬೇಡ್ಕರ್ವಾದಿ ಚಿಂತಕರು ಆರೋಪಿಸಿದ್ದಾರೆ. ಇದು ಸುಳ್ಳು ಮತ್ತು ಆಧಾರರಹಿತ ಆರೋಪ ಎಂದು ತೋರಿಸಲು ಮೂರು ಕಾರಣಗಳನ್ನು ನಾನು ಕೊಡಬಲ್ಲೆ.

ಮೊದಲ ಕಾರಣ: ಅಂಬೇಡ್ಕರ್ ಅವರು 1947ರ ಮಾರ್ಚ್ನಲ್ಲಿ ಪ್ರಕಟಿಸಿದ್ದ 'ಸ್ಟೇಟ್ಸ್ ಆ್ಯಂಡ್ ಮೈನಾರಿಟೀಸ್' ಪುಸ್ತಕವನ್ನು 'ಭಾರತ ಸಂಯುಕ್ತ ಸಂಸ್ಥಾನದ ಸಂವಿಧಾನ' ಎಂದು ಕರೆದಿದ್ದರು. 'ಪೂನಾ ಒಪ್ಪಂದ'ವನ್ನು ರದ್ದುಪಡಿಸಬೇಕು ಮತ್ತು ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಮರುಪರಿಚಯಿಸಬೇಕು ಎಂದು ಅವರು ಕರೆಕೊಟ್ಟಿದ್ದರು. ಆದರೆ, ಸ್ವತಂತ್ರ ಭಾರತದ ಸಂವಿಧಾನವನ್ನು ಅಳವಡಿಸಿದ ಸಂವಿಧಾನ ರಚನಾ ಸಭೆಯು ಈ ಪ್ರಸ್ತಾವವನ್ನು ತಿರಸ್ಕರಿಸಿತು. ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲು ಕ್ಷೇತ್ರಗಳು ಇರುವ ವ್ಯವಸ್ಥೆಯನ್ನೇ ಉಳಿಸಿಕೊಂಡಿತು. ಸಂವಿಧಾನ ಶಿಲ್ಪಿ ಎಂಬ ಖ್ಯಾತಿ ಹೊಂದಿದ್ದ, ಡಾ. ಅಂಬೇಡ್ಕರ್ ಅವರೇ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರೂ ಈ ನಿರ್ಧಾರಕ್ಕೆ ಬರಲಾಗಿತ್ತು.

ಡಾ. ಅಂಬೇಡ್ಕರ್ ಅವರು ಬರೆದ 'ಸ್ಟೇಟ್ಸ್ ಆ್ಯಂಡ್ ಮೈನಾರಿಟೀಸ್' ಪುಸ್ತಕಕ್ಕೂ ಸಂವಿಧಾನ ರಚನಾ ಸಮಿತಿಯು (ಇದರ ಬಹುಸಂಖ್ಯೆಯ ಸದಸ್ಯರು ಕಾಂಗ್ರೆಸ್ನವರೇ ಆಗಿದ್ದರು) ಅನುಮೋದಿಸಿದ ಸಂವಿಧಾನಕ್ಕೂ ಅಂತಹ ಹೋಲಿಕೆಯೇನೂ ಇರಲಿಲ್ಲ. ಉದಾಹರಣೆಗೆ, ಪರಿಶಿಷ್ಟ ಜಾತಿಗಳ ಸಮುದಾಯಗಳನ್ನು 'ಅಲ್ಪಸಂಖ್ಯಾತರು' ಎಂದು ಪರಿಗಣಿಸಬೇಕು ಎಂದು ಅಂಬೇಡ್ಕರ್ ಮುಂದಿಟ್ಟಿದ್ದ ಬೇಡಿಕೆಯನ್ನು ಸಂವಿಧಾನ ರಚನಾ ಸಭೆಯು ಸಾರಾ ಸಗಟಾಗಿ ತಿರಸ್ಕರಿಸಿತ್ತು. ಮುಸ್ಲಿಮರಿಗೆ ಇದ್ದ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನೂ ಸಭೆಯು ರದ್ದುಪಡಿಸಿದ್ದು ಗಮನಾರ್ಹ. ಆದುದರಿಂದಲೇ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಗಾಂಧೀಜಿ ಕಸಿದುಕೊಂಡರು ಎಂದು ಆಪಾದಿಸುವ ಅಂಬೇಡ್ಕರ್ವಾದಿಗಳು, ಗಾಂಧೀಜಿ ಮಾತ್ರವಲ್ಲ ಅಂಬೇಡ್ಕರ್ ಕೂಡ ಇದಕ್ಕೆ ಹೊಣೆಗಾರರು ಎಂಬುದನ್ನು ಗಮನಿಸಬೇಕು.

ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರೂ 1950ರಲ್ಲಿ ಅಳವಡಿಸಿಕೊಳ್ಳಲಾದ ಸಂವಿಧಾನದಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಲಿಲ್ಲ.

ಇದು ಮುಖ್ಯವಾದ ಪ್ರಶ್ನೆಯೊಂದಕ್ಕೆ ಕಾರಣವಾಗುತ್ತದೆ: ಡಾ.ಅಂಬೇಡ್ಕರ್ ಅವರು 'ಭಾರತದ ಸಂವಿಧಾನದ ಪಿತಾಮಹ ಎಂದು ಹೊಗಳಲಾಗುತ್ತಿದ್ದರೂ ಸಂವಿಧಾನದಲ್ಲಿರುವ ಎಷ್ಟು ವಿಚಾರಗಳು ಅವರ ಪರಿಕಲ್ಪನೆ ಮತ್ತು ಎಷ್ಟನ್ನು ಅವರು ಸೃಷ್ಟಿಸಿದ್ದಾರೆ? ರಾಜ್ಯಸಭೆಯಲ್ಲಿ 1953ರಲ್ಲಿ ನಡೆದ ಚರ್ಚೆಯಲ್ಲಿ ಡಾ. ಅಂಬೇಡ್ಕರ್ ಅವರೇ ಉತ್ತರಿಸಿದ್ದಾರೆ. 'ಈ ಸಂವಿಧಾನವು ಯಾರೊಬ್ಬರಿಗೂ ಹೊಂದಿಕೆ ಆಗುವುದಿಲ್ಲವಾದ್ದರಿಂದ ಇದನ್ನು ಸುಟ್ಟು ಹಾಕುವವರಲ್ಲಿ ನಾನೇ ಮೊದಲಿಗನಾಗಿರುತ್ತೇನೆ... ಜನರು ನನಗೆ ಹೀಗೆ ಹೇಳುತ್ತಲೇ ಇದ್ದಾರೆ: 'ಓಹ್, ಸಂವಿಧಾನವನ್ನು ಬರೆದವರು ನೀವೇ'. ನನ್ನ ಉತ್ತರ 'ನಾನೊಬ್ಬ ಗುಲಾಮನಾಗಿದ್ದೆ. ಏನನ್ನು ಮಾಡಲು ಹೇಳಿದ್ದರೋ ಅದನ್ನು ನನ್ನ ಇಚ್ಛೆಗೆ ವಿರುದ್ಧವಾಗಿ ಮಾಡಿದ್ದೇನೆ'.

ಭಾರತದ ಸಂವಿಧಾನವು ಹೇಗೆ ರಚನೆಗೊಂಡಿತು ಎಂಬುದರ ನಿಜವಾದ ಇತಿಹಾಸವನ್ನು ಇಂದಿನ ತಲೆಮಾರಿನ ಭಾರತೀಯರಿಗೆ ತೋರಿಸಿಕೊಡಬೇಕಿದೆ.

ಎರಡನೇ ಕಾರಣ: ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಯೋಜನೆಯನ್ನು ಭಾರತದ ಸಂವಿಧಾನದಲ್ಲಿ ಸೇರಿಸಿಕೊಳ್ಳಲಾಗಿದೆ ಎಂದು ಭಾವಿಸೋಣ. ಅದೇ ತರ್ಕದ ಪ್ರಕಾರ, ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೂ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಮಾಡಬೇಕಾಗುತ್ತಿತ್ತು. ಕ್ರಮೇಣ, ಇಂತಹುದೇ ಬೇಡಿಕೆಗಳು ಇತರೆ ಹಿಂದುಳಿದ ಜಾತಿಗಳಿಂದಲೂ ಬರುತ್ತಿದ್ದವು. ಈ ರೀತಿಯಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ಜಾತಿಗಳ ಸಮುದಾಯಗಳು ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡಿಕೊಂಡರೆ ನಮ್ಮ ಪ್ರಜಾಪ್ರಭುತ್ವ ಮತ್ತು ಭಾರತದ ಆಳ್ವಿಕೆ ಗತಿ ಏನಾಗುತ್ತಿತ್ತು? ಇಲ್ಲಿ ಎಲ್ಲವೂ ಅಸ್ತವ್ಯಸ್ತ ಆಗುತ್ತಿತ್ತು. ಅಷ್ಟೇ ಅಲ್ಲದೆ, ದಲಿತ ಸಮುದಾಯದ ವಿವಿಧ ಜಾತಿಗಳು ತಮಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎಂಬ ಬೇಡಿಕೆ ಮುಂದಿಡುತ್ತಿದ್ದವು. ಆಯ್ಕೆಯಾದ ಪ್ರತಿನಿಧಿಗಳು ತಮ್ಮ ಜಾತಿಗೆ ಮಾತ್ರ ಉತ್ತರದಾಯಿಗಳಾಗಿರುವುದರಿಂದ ನಮ್ಮ ಸಮಾಜವು ಜಾತಿಯ ನೆಲೆಯಲ್ಲಿ ಚೂರಾಗುತ್ತಿತ್ತು. 'ಜಾತಿ ವಿನಾಶ' ಮಾಡಬೇಕು ಎಂಬ ಡಾ. ಅಂಬೇಡ್ಕರ್ ಅವರ ಗುರಿಯು ಸಾಧ್ಯವಾಗದೆ, ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ವ್ಯವಸ್ಥೆ ಇದ್ದರೆ ಜಾತಿ ವ್ಯವಸ್ಥೆಯನ್ನು ಪಾಲಿಸಲು ಸಂವಿಧಾನವೇ ಅನುಮತಿ ಕೊಟ್ಟಂತಹ ವಿಪರ್ಯಾಸ ಸೃಷ್ಟಿಯಾಗುತ್ತಿತ್ತು.

ಮೂರನೇ ಕಾರಣ: ಪ್ರತ್ಯೇಕ ಪ್ರಾತಿನಿಧ್ಯ ಇದ್ದಿದ್ದರೆ ದಲಿತ ಸಮುದಾಯದಿಂದ ಸ್ವತಂತ್ರ ಮತ್ತು ಶಕ್ತ ದಲಿತ ನಾಯಕರು ಹೊರಹೊಮ್ಮುವುದು ಸಾಧ್ಯವಾಗುತ್ತಿತ್ತು ಎಂದು ಅಂಬೇಡ್ಕರ್‌ವಾದಿಗಳಲ್ಲಿ ಹಲವರು ವಾದಿಸುತ್ತಾರೆ. ಸಾಮಾನ್ಯ ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ ಮೀಸಲು ಕ್ಷೇತ್ರಗಳಿದ್ದರೂ ದಲಿತ ಅಭ್ಯರ್ಥಿಗಳು ದಲಿತೇತರ ಮತದಾರರ ಕಾಳಜಿಗಳಿಗೂ ಸ್ಪಂದಿಸಬೇಕಾಗುತ್ತದೆ. ಇದು ದಲಿತ ಸಮುದಾಯದ ಬಗ್ಗೆ ಅವರಲ್ಲಿ ಇರುವ ಕಾಳಜಿಯನ್ನು ದುರ್ಬಲಗೊಳಿಸುತ್ತದೆ ಎಂದು ಕೆಲವರು ವಾದಿಸುತ್ತಾರೆ. ಆದರೆ, ಪ್ರಜಾಪ್ರಭುತ್ವವು ಕೆಲಸ ಮಾಡಬೇಕಿರುವುದು ಹೀಗೆಯೇ ಅಲ್ಲವೇ? ಅಪಾರ ಸಂಖ್ಯೆಯ ಜಾತಿಗಳು, ಭಾಷೆಗಳು, ಧಾರ್ಮಿಕ ವೈವಿಧ್ಯ ಇರುವ



ಭಾರತದಂತಹ ದೇಶದಲ್ಲಿ ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಯೂ ತಮ್ಮ ಕ್ಷೇತ್ರದ ಎಲ್ಲ ಜನರನ್ನು ಪ್ರತಿನಿಧಿಸಬೇಕು ಮತ್ತು ಅವರಿಗೆ ಸೇವೆ ಒದಗಿಸಬೇಕು; ತಮ್ಮ ಜಾತಿಯ ಜನರಿಗೆ ಮಾತ್ರ ಅಲ್ಲ. ಆದುದರಿಂದ, ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಬೇಕು ಎನ್ನುವುದು ದಲಿತ ಪ್ರತ್ಯೇಕತಾವಾದದ ಅಪಾಯಕಾರಿ ಚಿಹ್ನೆಯಾಗಿದೆ. ಇದು ದಲಿತ ಸಮುದಾಯಕ್ಕೂ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ.

ಕೊನೆಯ ಒಂದು ಅಂಶ: 'ಹರಿಜನ–ದಲಿತ' ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ನನಗೆ ಒಂದು ವೈಯಕ್ತಿಕ ಕಾರಣವೂ ಇದೆ. ದೆಹಲಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ, ಕರ್ನಾಟಕ ಸೇರಿ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿರುವ ಹರಿಜನ ಸೇವಕ ಸಂಘದ ಜೊತೆಗೆ ಇತ್ತೀಚೆಗೆ ನಾನು ತೀರಾ ಹತ್ತಿರದಿಂದ ತೊಡಗಿಸಿಕೊಂಡಿದ್ದೇನೆ. 1950, 60 ಮತ್ತು 70ರ ದಶಕದಲ್ಲಿ ಹರಿಜನ ಸೇವಕ ಸಂಘವು ಅತ್ಯಂತ ಕ್ರಿಯಾಶೀಲವಾಗಿ ಇತ್ತು. ಆದರೆ, ಈಗ ಅದು ಕೇಂದ್ರದಿಂದ ಬದಿಗೆ ಸರಿದಿದೆ. ಡಾ. ಅಂಬೇಡ್ಕರ್ ಅವರ ಜೀವನ ಮತ್ತು ಹೋರಾಟದಿಂದ ಸ್ಫೂರ್ತಿಗೊಂಡು ಸಮಾಜ, ರಾಜಕಾರಣ ಮತ್ತು ಸಂಸ್ಕೃತಿಯಲ್ಲಿ ದಲಿತ ಕ್ರಿಯಾಶೀಲತೆ ಪ್ರಮಾಣವು ಏರುತ್ತಲೇ ಇರುವುದು ಇದಕ್ಕೆ ಮುಖ್ಯವಾದ ಕಾರಣ.

ದಲಿತರಲ್ಲಿನ ಈ ಹೊಸ ದೃಢತೆಗೆ ಒಂದು ಸಕಾರಾತ್ಮಕವಾದ ಭಾಗವೂ ಇದೆ. ಅದೇ ದಲಿತರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿರುವುದು. ದಮನ ಮತ್ತು ಅನ್ಯಾಯದ ವಿರುದ್ಧ ಅವರನ್ನು ಒಂದುಗೂಡಿಸಿದೆ. ಹಿಂದೂ 'ಪ್ರಬಲ ಜಾತಿ'ಗಳ ಜನರ ಕಣ್ಣನ್ನೂ ಇದು ತೆರೆಸಿದೆ. ದಲಿತ ಸೋದರರು ಅನುಭವಿಸಿದ ನೋವು ಮತ್ತು ಅಪಮಾನವನ್ನು ತೊಡೆದು ಹಾಕುವ ತಮ್ಮ ಹೊಣೆಗಾರಿಕೆಯ ಬಗ್ಗೆ ಅರಿವು ಮೂಡಿಸಿದೆ. ದಮನಿತ ಜಾತಿಗಳ ಜನರ ಸ್ಥಿತಿಯ ಬಗ್ಗೆ ಅಂಬೇಡ್ಕರ್ ಅವರಲ್ಲಿ ಇರುವ ಆಕ್ರೋಶದ ಆಳ ತಮಗೆ ಅರ್ಥವಾಗುತ್ತದೆ, ಅವರು ಆ ಜಾತಿಗಳಲ್ಲಿಯೇ ಜನಿಸಿದವರು ಮತ್ತು ಜಾತಿ ಶೋಷಣೆಯ ಸಂತ್ರಸ್ತರು ಎಂದು ಗಾಂಧೀಜಿ ಅವರೇ ಹೇಳಿಕೊಂಡಿದ್ದರು.

ಸಮಾಜದ ಎಲ್ಲ ವರ್ಗಗಳ ಜನರೂ ಅಂಬೇಡ್ಕರ್ ಅವರ ಶ್ರೇಷ್ಠತೆಯನ್ನು ಗುರುತಿಸಿದ್ದಾರೆ ಮತ್ತು ಅವರನ್ನು ಗೌರವಿಸುತ್ತಾರೆ ಎಂಬುದೇ ಹಿಂದೂ 'ಪ್ರಬಲ ಜಾತಿ'ಗಳ ಜನರಲ್ಲಿ ಮೂಡಿರುವ ಹೊಸ ಅರಿವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅಸ್ಪೃಶ್ಯತೆಯು ಬಹುಪಾಲು ಮರೆಯಾಗಿದ್ದರೂ ಜಾತಿ ಅಸಮಾನತೆ, ಪೂರ್ವಗ್ರಹ ಮತ್ತು ತಾರತಮ್ಯದ ಎಲ್ಲ ಕುರುಹುಗಳನ್ನು ತೊಡೆದು ಹಾಕುವ ದಿಸೆಯಲ್ಲಿ ಭಾರತವು ಇನ್ನೂ ಬಹುದೂರ ಸಾಗಬೇಕಿದೆ. ಈ ಗುರಿಯನ್ನು ಸಾಧಿಸುವುದಕ್ಕಾಗಿ ನಾವು ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರ ಕುರಿತು ಅಂಧ 'ಭಕ್ತಿ' ತೋರದೆಯೇ ಅವರಿಬ್ಬರಿಂದಲೂ ಸ್ಫೂರ್ತಿ ಪಡೆಯಬೇಕು. ದಾರಿಗಳು ಬೇರೆ ಬೇರೆ ಆಗಿದ್ದರೂ ಈ ಇಬ್ಬರೂ ಸಮಾನ ಗುರಿಯ ಬೆನ್ನು ಹತ್ತಿದ ಶ್ರೇಷ್ಠ ನಾಯಕರು. ಆದ್ದರಿಂದ, ಗಾಂಧಿ–ಅಂಬೇಡ್ಕರ್ ಅವರನ್ನು ಸರಿಯಾಗಿ, ಸತ್ಯನಿಷ್ಠವಾಗಿ ತಿಳಿದುಕೊಳ್ಳಲು ಸಂವಾದ ಬೇಕು, ವಿವಾದ ಬೇಡ; ಸಹಕಾರ ಬೇಕು, ಸಂಘರ್ಷ ಬೇಡ. ■

ಅಪೂರ್ವ ಪತ್ರಕರ್ತ ಗಾಂಧೀಜಿ



ಎನ್ ಆರ್ ವಿಶುಕುಮಾರ್
ಉಪಾಧ್ಯಕ್ಷರು,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬಹುರೂಪಿ.ಅವರ ಬದುಕನ್ನು ನಿರ್ಮಲ ಚಿತ್ತದಿಂದ ನೋಡಿದರೆ ಅವರ ನಾನಾ ರೂಪಗಳು ನಮ್ಮ ಕಣ್ಣಿಗೆ ಕಾಣುತ್ತವೆ. ಬಾಲ್ಯದಿಂದಲೂ ಅವರು ಸತ್ಯದ ಪ್ರತಿಪಾದಕ. ಬದುಕಿನ ಕಡೆಯ ಉಸಿರು ಇರುವವರೆಗೂ ಅವರು ಒಮ್ಮೆಯೂ ತಮ್ಮ ಜೀವನದಲ್ಲಿ ಸುಳ್ಳು ಹೇಳಲಿಲ್ಲ.ವಕೀಲರಾಗಿ ಕೂಡಾ ಅವರು ನ್ಯಾಯಾಲಯದ ಮುಂದೆ ಸತ್ಯವನ್ನು ಮಾತ್ರ ಪ್ರತಿಪಾದಿಸುತ್ತಿದ್ದರು. ಒಮ್ಮೆ ತಮ್ಮ ಕಕ್ಷಿದಾರನ ವಾದದಲ್ಲಿ ಸುಳ್ಳು ಇದೆ ಎಂದು ಅವರಿಗೆ ಅನ್ನಿಸಿದಾಗ ಅವರು ಆ ಪ್ರಕರಣವನ್ನೇ ಕೈ ಬಿಟ್ಟು ಹೊರ ನಡೆದ ಉದಾಹರಣೆಯೂ ಇದೆ. ಪ್ರಕೃತಿ ಚಿಕಿತ್ಸೆಯಲ್ಲಿ ಅಚಲ ನಂಬಿಕೆ ಇಟ್ಟಿದ್ದ ಅವರು ತಮ್ಮ ಮಗನ ಜೀವಕ್ಕೆ ಕುತ್ತು ಬಂದಾಗಲೂ ತಮ್ಮ ನಂಬಿಕೆಯಿಂದ ಹಿಂದೆ ಸರಿಯದೆ ಮುಂದುವರಿದು ಮಗನ ಆರೋಗ್ಯದಲ್ಲಿ ಯಶ ಸಾಧಿಸಿದರು. ತಮ್ಮ ಪತ್ನಿಯ ಜೀವವನ್ನು ಪಣಕ್ಕೆ ಇಟ್ಟು ತಮ್ಮ ಸಸ್ಯಾಹಾರದ ವ್ರತವನ್ನು ಪಾಲಿಸಿದರು. ಸಾಮಾನ್ಯ ಜನರಂತೆ ಬದುಕ ಬೇಕೆಂದು ಎರಡು ತುಂಡು ಬಟ್ಟೆಯಲ್ಲೇ ತಮ್ಮ ಪೂರ್ತಿ ಜೀವನ ಸವೆಸಿದರು. ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಕ್ಕೆ ಪ್ರವೇಶ

ಮಾಡದೇ ತಳ ಸಮುದಾಯಗಳಿಗೆ ನೈತಿಕ ಬೆಂಬಲ ನೀಡಿದರು. ಮನೆಯೊಳಗೆ ಬಂಧಿತರಾಗಿದ್ದ ಮಹಿಳೆಯರನ್ನು ಸಾಮಾಜಿಕ ಚಳವಳಿಗಳಲ್ಲಿ ತೊಡಗಿಸುವ ಮೂಲಕ ಅವರಿಗೆ ಸಮಾನತೆ ಕಲ್ಪಿಸಿದರು. ಸಹಕಾರಿ ತತ್ವದಲ್ಲಿ ನಂಬಿಕೆಯಿಟ್ಟು ಚರಕದ ಮೂಲಕ ನೂಲು ನೇಯ್ದು ಖಾದಿವಸ್ತ್ರ ಉತ್ಪಾದನೆಯನ್ನು ಮತ್ತು ಗೃಹ ಕೈಗಾರಿಕೆಗಳನ್ನು ಸಹಕಾರಿ ಸಂಘಗಳ ಮೂಲಕ ಉತ್ತೇಜಿಸಿದರು.

ಗಾಂಧೀಜಿಯವರ ಇಂಥ ಬಹುರೂಪಗಳಲ್ಲಿ ಅವರ ಪತ್ರಕರ್ತ ರೂಪ ಸಹ ಬಹಳ ಮುಖ್ಯವಾಗಿದೆ. ಪತ್ರಕರ್ತರಾಗಿ ಅವರು ತಮ್ಮ ಜೀವನದಲ್ಲಿ ಸಾಧಿಸಿದ ಯಶಸ್ಸು ಅಪಾರ.ಅದರ ಚಿತ್ರಣವೇ ಒಂದು ಚೇತೋಹಾರಿ ಅಧ್ಯಯನ. ಅವರು 'ಇಂಡಿಯನ್ ಒಪೀನಿಯನ್', 'ನವಜೀವನ' , 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳ ಸಂಪಾದಕರಾಗಿ ಭಾರತೀಯ ಪತ್ರಿಕಾ ರಂಗದಲ್ಲಿ ಅಚ್ಚಳಿಯದ ಹೆಜ್ಜೆ ಗುರುತು ಮೂಡಿಸಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿನ ಗುಜರಾತಿ ಉದ್ಯಮಿ ಅಬ್ದುಲ್ಲಾ ಶೇಟ್ ರ ಪರವಾಗಿ ವಕೀಲಿಕೆ ನಡೆಸಲು ಗಾಂಧೀಜಿ ದಕ್ಷಿಣ ಆಫ್ರಿಕಾಗೆ 1893 ರಲ್ಲಿ ಪ್ರಥಮ ಬಾರಿಗೆ ತೆರಳಿದ ಗಾಂಧಿ ಅಲ್ಲಿನ ಬ್ರಿಟಿಷ್ ವಸಾಹತುಶಾಹಿ ಕಪ್ಪು ವರ್ಣಿಯರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದ ರೀತಿಯನ್ನು ನೋಡಿ ನೊಂದುಕೊಳ್ಳುತ್ತಾರೆ . ಭಾರತೀಯರೂ ಸೇರಿದಂತೆ ಕಪ್ಪು ವರ್ಣಿಯರ ಮೇಲೆ ಬಿಳಿಯರು ನಡೆಸುತ್ತಿದ್ದ ದೌರ್ಜನ್ಯಗಳನ್ನು ತಾವೂ ಅನುಭವಿಸಿ ಅವಮಾನಿತರಾಗುತ್ತಾರೆ. ಮೂರು ವರ್ಷಗಳ ನಂತರ 1896 ರಲ್ಲಿ ವಾಪಸ್ ಭಾರತಕ್ಕೆ ಮರಳಿ ಬಂದು ಪತ್ನಿ ಕಸ್ತೂರ್ ಬಾ ಜೊತೆಗೂಡಿ 1897 ರಲ್ಲಿ ಎರಡನೇ ಬಾರಿಗೆ ದಕ್ಷಿಣ ಆಫ್ರಿಕಾಕ್ಕೆ ತೆರಳಿ ನಾಲ್ಕು ವರ್ಷಗಳ ನಂತರ 1901ಕ್ಕೆ ಮರಳಿ ಭಾರತಕ್ಕೆ ಬರುತ್ತಾರೆ. ದಕ್ಷಿಣ ಆಫ್ರಿಕಾದ ಈ ತಾತ್ಕಾಲಿಕ ನೆಲೆಯ ಸಂದರ್ಭದಲ್ಲಿಯೇ ಗಾಂಧಿ ಪತ್ರಕರ್ತ ಪ್ರವೃತ್ತಿಯ ಪ್ರಾಥಮಿಕ ಪಾಠಗಳನ್ನು ಕಲಿಯುತ್ತಾರೆ. ಕಪ್ಪು ಜನರ ಮತ್ತು ಭಾರತೀಯರ ಬವಣೆಗಳ ಬಗ್ಗೆ ಅಲ್ಲಿನ ಸ್ಥಳೀಯ ಪತ್ರಿಕೆಗಳಿಗೆ ಓದುಗರ ಪತ್ರ ಬರೆಯುವ ಮೂಲಕ ಅಲ್ಲಿನ ಜನರ ಮತ್ತು ಸ್ಥಳೀಯ ಆಡಳಿತದ ಗಮನ ಸೆಳೆಯುತ್ತಾರೆ . ಈ ಪತ್ರ ಲೇಖನಗಳ ಮೂಲಕ



ಅಲ್ಪಪ್ರಮಾಣದ ಯಶಸ್ಸನ್ನೂ ಸಹ ಗಳಿಸುತ್ತಾರೆ.

ಗಾಂಧಿ ದಕ್ಷಿಣ ಆಫ್ರಿಕಾದಲ್ಲಿಯೇ ನೆಲೆಸಿ ವಕೀಲಿ ವೃತ್ತಿ ನಡೆಸಲು ಕುಟುಂಬ ಸಮೇತರಾಗಿ 1902 ರಲ್ಲಿ ಅಲ್ಲಿಗೆ ಮರಳಿ ಹೋದದ್ದು ಗಾಂಧೀಜಿಯವರ ಬದುಕಿನಲ್ಲಿ ಮಹತ್ತರ ತಿರುವಾಗುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದ ಗಾಂಧಿ ಬ್ರಿಟಿಷರ ವರ್ಣಭೇದ ನೀತಿಯ ವಿರುದ್ಧ ಅಲ್ಲಿನ ಕಪ್ಪು ವರ್ಣಿಯರೆಲ್ಲರನ್ನೂ ಒಗ್ಗೂಡಿಸಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಅಹಿಂಸಾ ಮಾದರಿಯ ಹೋರಾಟ ಮಾಡಿ ಬಿಳಿಯರ ಮನಗೆದ್ದು ಕಪ್ಪು ವರ್ಣಿಯರಿಗೆ ಹಲವು ಮೂಲಭೂತ ಹಕ್ಕುಗಳನ್ನು ಗಳಿಸಿ ಕೊಡುತ್ತಾರೆ. ಈ ಹೋರಾಟದ ಅವಧಿಯಲ್ಲಿ ಗಾಂಧೀಜಿ ಅಪ್ರತಿಮ ಪತ್ರಕರ್ತರಾಗಿ ರೂಪುಗೊಂಡದ್ದು ಸಹ ಒಂದು ಮಹತ್ತರ ಸಾಧನೆ.




Indian Opinion

PUBLISHED WEEKLY IN ENGLISH AND GUJARATI

A FAREWELL LETTER

ಅದು 1903 ನೇ ಇಸವಿ .ದಕ್ಷಿಣ ಆಫ್ರಿಕಾದ ಡರ್ಬಾನ್ ನಗರ. ಬ್ರಿಟಿಷ್ ವಸಾಹತುಷಾಹಿಯ ದಬ್ಬಾಳಿಕೆ ದೌರ್ಜನ್ಯ ಮತ್ತು ವರ್ಣಭೇದ ನೀತಿಯ ವಿರುದ್ಧ ಕಪ್ಪು ಜನರನ್ನು ಒಗ್ಗೂಡಿಸಿ ಹೋರಾಟ ರೂಪಿಸುತ್ತಿದ್ದ ಗಾಂಧಿಯವರ ಮುಂದೆ 'ಇಂಡಿಯನ್ ಒಪೀನಿಯನ್' ಎನ್ನುವ ಪತ್ರಿಕೆ ಹೊರತರುವ ಪ್ರಸ್ತಾವನೆ ಬರುತ್ತದೆ.ಯಾವುದೇ ಹೋರಾಟಗಳಲ್ಲಿ ಪತ್ರಿಕೆಗಳ ಮಹತ್ವವನ್ನು ಆ ವೇಳೆಗಾಗಲೇ ಅರಿತಿದ್ದ ಗಾಂಧೀಜಿ ತಾತ್ವಿಕವಾಗಿ ಈ ಸಲಹೆಯನ್ನು ಒಪ್ಪಿ ಹೆಜ್ಜೆ ಇಡುತ್ತಾರೆ. ತಕ್ಕ ಮಟ್ಟಿಗೆ ಪತ್ರಿಕೋದ್ಯಮದ ಅನುಭವವಿದ್ದ ಮನ್ ಸುಖ್ ಲಾಲ್ ಎನ್ನುವವರ ಸಂಪಾದಕತ್ವದಲ್ಲಿ 'ಇಂಡಿಯನ್ ಒಪೀನಿಯನ್' ವಾರಪತ್ರಿಕೆ 1904 ರಲ್ಲಿ



ಪ್ರಕಟಣೆ ಆರಂಭಿಸುತ್ತದೆ. ಹೊಸ ಉತ್ಸಾಹದಲ್ಲಿದ್ದ ಅಲ್ಲಿನ ವಲಸೆ ಭಾರತೀಯರು ಇಂಗ್ಲಿಷ್, ಗುಜರಾತಿ, ತಮಿಳು ಮತ್ತು ಹಿಂದಿ ಈ ನಾಲ್ಕು ಭಾಷೆಗಳಲ್ಲಿ ಪತ್ರಿಕೆಯನ್ನು ಹೊರತರುತ್ತಾರೆ. ಆದರೆ ತಮಿಳು ಮತ್ತು ಹಿಂದಿ ಪತ್ರಿಕೆಗಳು ಕೇವಲ ಹೆಸರಿಗೆ ಮಾತ್ರ ಮುದ್ರಣವಾಗುತ್ತಿದ್ದು ಆ ಪತ್ರಿಕೆಗಳು ತಮ್ಮ ಉದ್ದೇಶ ಸಾಧನೆಯಲ್ಲಿ ವಿಫಲವಾಗಿರುವುದನ್ನು ಗಾಂಧೀಜಿ ಆರಂಭದ ವಾರಗಳಲ್ಲಿಯೇ ಗಮನಿಸುತ್ತಾರೆ . ಉದ್ದೇಶ ಸಾಧನೆಯಾಗದ ಯಾವುದೇ ಕೆಲಸವನ್ನು ಮುಂದುವರಿಸುವುದು ವಂಚನೆಯಾಗುತ್ತದೆ ಎನ್ನುವುದನ್ನು ಅರಿತು ಗಾಂಧಿ ಆ ಪತ್ರಿಕಾ ಆವೃತ್ತಿಗಳ ಪ್ರಕಟಣೆಯನ್ನು ನಿಲ್ಲಿಸುತ್ತಾರೆ. 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಗುಜರಾತಿ ಮತ್ತು ಇಂಗ್ಲಿಷ್ ಆವೃತ್ತಿಗಳು ನಂತರವೂ ಮುಂದುವರಿಯುತ್ತವೆ. ಆದರೆ ಇವು ಲಾಭದಾಯಕವಾಗಿ ನಡೆಯುತ್ತಿರಲಿಲ್ಲ. ಹೀಗಾಗಿ ಪತ್ರಿಕೆ ಆದಾಯವಿಲ್ಲದೆ ಸೊರಗಿ ಗಾಂಧಿಯವರೇ ಪ್ರತಿ ತಿಂಗಳೂ ತಮ್ಮ ಉಳಿತಾಯದ ಹಣವನ್ನು ಹಾಕಿ ಪತ್ರಿಕೆ ಹೊರ ತರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಆದರೂ ಅವರು ಧೃತಿಗೆಡದೆ ಪತ್ರಿಕೆಯ ಪ್ರಕಟಣೆಯನ್ನು ಮುಂದುವರಿಸುತ್ತಾರೆ. ಪತ್ರಿಕೆ ಭಾರತೀಯರ ಹೋರಾಟಗಳಿಗೆ ದೊಡ್ಡ ಧ್ವನಿಯಾಗಿ ನಿಂತು ಸೇವೆ ಸಲ್ಲಿಸಿದ್ದರ ಬಗ್ಗೆ ಗಾಂಧಿಗೆ ಅಭಿಮಾನ ಇರುತ್ತದೆ. ನಾವು ಪತ್ರಿಕೆಯನ್ನು ಪ್ರಾರಂಭಿಸಿದ್ದು ಹಣ ಗಳಿಸುವ ವ್ಯಾಪಾರೋದ್ಯಮಕ್ಕಾಗಿ ಅಲ್ಲ ಎನ್ನುವ ಖಚಿತ ನಿಲುವು ಸಹ ಗಾಂಧಿಯವರದ್ದಾಗಿರುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಹೊರತರುವಲ್ಲಿ ಅವರು ಪಡುತ್ತಿದ್ದ ಪ್ರಯಾಸ ಮತ್ತು ಸಾಹಸಗಳದ್ದೇ ಒಂದು ಕತೆಯಾಗುತ್ತದೆ. ಫೀನಿಕ್ಸ್ ಆಶ್ರಮದಲ್ಲಿ ಅವರು ತಮ್ಮದೇ ಸ್ವಂತ ಮುದ್ರಣಾಲಯ ತೆರೆದು ಪ್ರಥಮ ಸಂಚಿಕೆ ಹೊರತಂದ ರೋಚಕ ಕತೆಯನ್ನು ಸ್ವಂತ ಪತ್ರಿಕೆ ಹೊರ ತರುವ ಎಲ್ಲ ಉತ್ಸಾಹಿಗಳು ಓದಲೇ ಬೇಕು. ಡರ್ಬಾನ್ ನಗರದಲ್ಲಿ ಮುದ್ರಣವಾಗುತ್ತಿದ್ದ ಪತ್ರಿಕೆಯನ್ನು ಖರ್ಚು ವೆಚ್ಚ ಕಡಿಮೆ ಮಾಡಿಕೊಳ್ಳುವ ದೃಷ್ಟಿ ಹಾಗೂ ಪೂರ್ಣ ಪ್ರಮಾಣದಲ್ಲಿ ವೃತ್ತಿಯಾಗಿ ಸ್ವೀಕರಿಸುವ ಸಲುವಾಗಿ ಅದನ್ನು ಬೇರೆ ಕಡೆಗೆ ಸ್ಥಳಾಂತರಿಸ ಬೇಕು ಎನ್ನುವ ನಿರ್ಧಾರವಾಗುತ್ತದೆ. ಫೀನಿಕ್ಸ್ ನಗರದ ಹೊರವಲಯದಲ್ಲಿ ಇದಕ್ಕಾಗಿ ಇಪ್ಪತ್ತು ಎಕರೆ ಜಮೀನು ಖರೀದಿಸಿ ಮುದ್ರಣಾಲಯವನ್ನು ಫೀನಿಕ್ಸ್ ಆಶ್ರಮಕ್ಕೆ ಗಾಂಧಿ ಸ್ಥಳಾಂತರಿಸುತ್ತಾರೆ. ಪೆಟ್ರೋಲ್ ನಿಂದ ನಡೆಸುವ ಒಂದು ಮುದ್ರಣ ಯಂತ್ರವನ್ನು ಆಶ್ರಮದಲ್ಲಿ ಸಜ್ಜುಗೊಳಿಸಲಾಗುತ್ತದೆ . ಪ್ರಥಮ ಸಂಚಿಕೆಯ ಅಚ್ಚುಮೊಳೆ ಜೋಡಿಸಿ ಪೇಜು ಕಟ್ಟಿ ಮುದ್ರಣ ಯಂತ್ರದ ಮೇಲಿಟ್ಟು ಸ್ವಿಚ್ ಒತ್ತಿದರೆ ಅದು ಚಾಲೂ ಆಗುವುದೇ ಇಲ್ಲ. ಎಷ್ಟು ಪ್ರಯತ್ನಿಸಿದರೂ ಅದು ಚಾಲನೆಥಿಚಿರಿಚಿಜಜ ಹೋದಾಗ ಗಾಂಧಿ ಆಶ್ರಮ ನಿರ್ಮಾಣಕ್ಕೆ ಬಂದಿದ್ದ ಬಡಗಿ ಕೆಲಸದವರ ಮನ ಒಲಿಸಿ ಅದರಲ್ಲಿ ದೃಢಕಾಯರಾಗಿದ್ದ ಮೂರು ನಾಲ್ಕು ಮಂದಿಯಿಂದ ಮುದ್ರಣ ಯಂತ್ರದ ತಿರುಗು ಚಕ್ರವನ್ನು ಕೈಯಿಂದಲೇ ತಿರುಗಿಸಿ ರಾತ್ರಿಯಿಡಿ ಕಾರ್ಯ ನಿರ್ವಹಿಸಿ ಸಮಯಕ್ಕೆ ಸರಿಯಾಗಿ ಪತ್ರಿಕೆಯನ್ನು ಮುದ್ರಿಸಿದ ಸಾಹಸಿ ಗಾಂಧಿ . ರಾತ್ರಿಯಿಡೀ ಶ್ರಮ ವಹಿಸಿ ಮುದ್ರಣ ಮಾಡಿದ ನಂತರ ಮರುದಿನ ಬೆಳಿಗ್ಗೆ ಯಂತ್ರ ಚಾಲು ಮಾಡಲು ಸ್ವಿಚ್ ಹಾಕಿದ ಕೂಡಲೇ ಅದು ಹಿಂದಿನ ದಿನ ಏನೂ ಆಗಿಲ್ಲ ಎನ್ನುವಂತೆ ತನ್ನಷ್ಟಕ್ಕೆ ತಾನೇ ಚಾಲೂ ಆದ ಪ್ರಸಂಗವನ್ನು ಗಾಂಧಿ ಹಾಸ್ಯಮಯವಾಗಿ ವರ್ಣಿಸಿದ್ದಾರೆ. ಬಹುಶಃ ಯಂತ್ರಕ್ಕೂ ಏನೋ ಬೇಸರವಾಗಿ ಚಾಲೂ ಆಗಿಲ್ಲದೇ ಇರಬಹುದು ಅಥವಾ ಅದಕ್ಕೂ ವಿಶ್ರಾಂತಿಯ ಅಗತ್ಯವಿತ್ತೇನೋ ಎಂದು ನಗೆಚಾಟಿಕೆ ಮಾತುಗಳನ್ನು ಅವರು ತಮ್ಮ ಆತ್ಮಕಥೆಯಲ್ಲಿ ಲಘು ಬರವಣಿಗೆಯ ಶೈಲಿಯಲ್ಲಿ ಬರೆದಿದ್ದಾರೆ.


ದಕ್ಷಿಣ ಆಫ್ರಿಕಾದಲ್ಲಿ ಕಪ್ಪು


નવજીવન


Young India

A Weekly Journal

Edited by M. K. Gandhi



ವರ್ಣಿಯರಿಗೆ ಒಂದು ಹಂತದ ಗೆಲುವನ್ನು ದೊರಕಿಸಿಕೊಟ್ಟ ನಂತರ ಗಾಂಧಿ '1915 ರಲ್ಲಿ ಭಾರತಕ್ಕೆ ವಾಪಸಾಗುತ್ತಾರೆ. ಭಾರತಕ್ಕೆ ಗಾಂಧಿ ಬರುವ ವೇಳೆಗಾಗಲೇ ಇಲ್ಲಿ ಗೋಪಾಲಕೃಷ್ಣ ಗೋಖಲೆ ಮತ್ತು ಬಾಲಗಂಗಾಧರ ತಿಲಕ್ ಹಾಗೂ ಇನ್ನಿತರ ಮುಖಂಡರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟ ಆರಂಭವಾಗಿರುತ್ತದೆ. ಗಾಂಧೀಜಿ ಗುಜರಾತ್ ರಾಜ್ಯದ ಅಹಮದಾಬಾದಿನ ಕೋಚ್ರಾಬ್ ನಲ್ಲಿ ಆಶ್ರಮ ಸ್ಥಾಪಿಸಿ ಅಲ್ಲಿಂದ ತಮ್ಮ ಹೋರಾಟ ಚಟುವಟಿಕೆಗಳನ್ನು ನಡೆಸಲು ಯೋಜಿಸಿರುತ್ತಾರೆ. 1919 ರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಆಸುಪಾಸಿನಲ್ಲಿ ಅಹಮದಾಬಾದ್ ನಿಂದ ಗುಜರಾತಿ ಭಾಷೆಯಲ್ಲಿ 'ನವಜೀವನ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಯಂಗ್ ಇಂಡಿಯಾ' ವಾರ ಪತ್ರಿಕೆಗಳು ಗಾಂಧೀಜಿ ನೇತೃತ್ವದಲ್ಲಿ ಆರಂಭವಾಗುತ್ತವೆ. ದಕ್ಷಿಣ ಆಫ್ರಿಕಾದಲ್ಲಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಮೂಲಕ ಕಲಿತ ಪಾಠಗಳು ಮತ್ತು ಯಶಸ್ಸನ್ನು ಆಧರಿಸಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕೂಡಾ ಪತ್ರಿಕೆಗಳ ಮೂಲಕ ತಮ್ಮ ಹೋರಾಟಕ್ಕೆ ಬಲ ಮತ್ತು ಬೆಂಬಲವನ್ನು ಜನರಿಂದ ಪಡೆಯಲು ಗಾಂಧಿ ಮುಂದಾಗುತ್ತಾರೆ.

ಯಾವುದೇ ಪತ್ರಿಕೆಗಳು ಜಾಹಿರಾತಿನ ಮುಲಾಜಿಗೆ ಸಿಲುಕಿ ಪ್ರಭಾವಕ್ಕೆ ಒಳಗಾಗಿ ತನ್ನ ಹೋರಾಟದ ಧ್ವನಿಯನ್ನು ಕಳೆದುಕೊಳ್ಳಬಾರದು ಎನ್ನುವುದು ಆರಂಭದಿಂದಲೂ ಗಾಂಧಿಯವರ ನಿಲುವಾಗಿತ್ತು.ಹೀಗಾಗಿ ಗಾಂಧೀಜಿ ತಾವು ನಂಬಿಕೊಂಡಿದ್ದ ಆದರ್ಶದಂತೆ 'ತಮ್ಮ ಪತ್ರಿಕೆಗಳಿಗೆ ಜಾಹಿರಾತು ತೆಗೆದುಕೊಳ್ಳುವುದಿಲ್ಲ' ಎಂದು ಪ್ರಥಮ ಸಂಚಿಕೆಯಲ್ಲೇ ಪ್ರಕಟಿಸುತ್ತಾರೆ. ಬಾಂಬೆ ಮೂಲದ ಬಾಂಬೆಕ್ರಾನಿಕಲ್ ಪತ್ರಿಕಾ ಸಮೂಹದ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಮುಂಬಯಿಯಿಂದಲೇ ಪ್ರಕಟಿಸಲು ಅದರ ಪ್ರವರ್ತಕರು ಮೊದಲು ಯೋಜಿಸಿರುತ್ತಾರೆ. ಆದರೆ ನವಜೀವನ ಪತ್ರಿಕೆಯ ಜೊತೆಯಲ್ಲೇ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಅಹಮದಾ ಬಾದ್ ನಲ್ಲಿಯೇ ಪ್ರಕಟಿಸುವುದರಿಂದ ಆಡಳಿತ ನಿರ್ವಹಣೆಗೆ ಮತ್ತು ಸಂಪಾದಕೀಯ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಗಾಂಧಿ ಮುಂದಾಲೋಚಿಸಿ ಎರಡೂ ಪತ್ರಿಕೆಗಳನ್ನು ಅಹಮದಾಬಾದಿನಿಂದಲೇ



THE CONGRESS
YOUNG INDIA
Published Every Wednesday.

ಪ್ರಕಟಿಸಲು ಎಲ್ಲರನ್ನೂ ಒಪ್ಪಿಸುತ್ತಾರೆ. ಈ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಡರ್ಬಾನ್ ನಗರದಿಂದ ಫೀನಿಕ್ಸ್ ಆಶ್ರಮಕ್ಕೆ ಸ್ವಂತ ಮುದ್ರಣಾಲಯಕ್ಕೆ ಸ್ಥಳಾಂತರಿಸಿ ಗಾಂಧಿ ಯಶಸ್ಸು ಕಂಡಿದ್ದನ್ನು ಇಲ್ಲಿ ನೆನಪಿಸಿ ಕೊಳ್ಳ ಬಹುದು. ಗಾಂಧಿ ಯಾವುದೇ ಕೆಲಸವನ್ನು ಆರಂಭಿಸುವಾಗ ಎಚ್ಚರಿಕೆಯ ಮುಂದಾಲೋಚನೆ ಮಾಡಿಯೇ ನಿರ್ಧಾರ ತೆಗೆದುಕೊಳ್ಳುತ್ತಿದ್ದುದಕ್ಕೆ ಇದು ಒಳ್ಳೆಯ ಉದಾಹರಣೆ.

ಗಾಂಧಿ ತಮ್ಮ ಕಾರ್ಯಗಳಲ್ಲಿ ಎಷ್ಟೇ ಆತ್ಮವಿಶ್ವಾಸ ಹೊಂದಿದ್ದರು ಸಹ ಎಲ್ಲರಂತೆ ಕಾರ್ಯಾರಂಭದ ಆತಂಕ ಮತ್ತು ಅಳುಕುಗಳು ಅವರನ್ನು ಕೂಡಾ ಕಾಡುತ್ತಿದ್ದವು. 'ನವಜೀವನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆ ಆರಂಭವಾದಾಗ ನನಗೆ ನಡುಕ ಶುರುವಾಯಿತು. ಸಾರ್ವಜನಿಕ ಜೀವನದ



ಬಹು ದೊಡ್ಡ ಜವಾಬ್ದಾರಿ ನನ್ನ ಹೆಗಲ ಮೇಲೆ ಇದೆ ಎನ್ನುವ ಭಯ ನನ್ನನ್ನು ಕಾಡಲು ಆರಂಬಿಸಿತು ಎಂದು ಅವರು ತಮ್ಮ ಆತ್ಮಕತೆಯಲ್ಲೇ ಹೇಳಿಕೊಂಡಿದ್ದಾರೆ. ಆದರೆ ಯಾವುದೇ ಕಾರ್ಯವು ಸತ್ಯ ಮತ್ತು ನೀತಿ ಮಾರ್ಗದಲ್ಲಿ ನಡೆಯುತ್ತಿದ್ದರೆ ಅನಗತ್ಯವಾಗಿ ಭಯ ಪಡಬೇಕಿಲ್ಲ ಎನ್ನುವುದು ಗಾಂಧಿಯ ಅಚಲ ನಂಬಿಕೆಯಾಗಿತ್ತು.



ಗಾಂಧೀಜಿ ಗುಜರಾತಿ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪ್ರಾವಿಣ್ಯತೆ ಹೊಂದಿದ್ದರು. ಸರಳವಾಗಿ ಮತ್ತು ನೇರವಾಗಿ ಬರೆಯುವ ಕಲೆ ಅವರಿಗೆ ಆರಂಭದಿಂದಲೇ ಒಲಿದಿತ್ತು. ವಕೀಲರಾಗಿ ಅವರು ಮುಂಬಯಿ ಮತ್ತು ರಾಜ್ ಕೋಟಾದಲ್ಲಿ ಕಾರ್ಯ ಶುರು ಮಾಡಿದಾಗ ನ್ಯಾಯಾಧೀಶರ ಎದುರು ವಾದ ಮಂಡಿಸಲೇ ಆಗದೆ ನಾಲಿಗೆ ಒಣಗಿ ನಡುಕ ಹುಟ್ಟಿ ವಕೀಲ ಸಮೂಹದ ಎದುರು ನಗೆಪಾಟಲಿಗೆ ಈಡಾಗಿದ್ದ ವಿಷಯ ಅವರ ಆತ್ಮಕತೆಯಲ್ಲೇ ಬರುತ್ತದೆ. ಆದರೆ ವಕಾಲತ್ತಿನ ಒಕ್ಕಣಿಕೆ ಮತ್ತು ಲಿಖಿತ ನಿರೂಪಣೆಯಲ್ಲಿ ಗಾಂಧಿ ಪ್ರಾವೀಣ್ಯತೆ ಹೊಂದಿದ್ದರು. ಈ ಬರವಣಿಗೆಯ ಕೌಶಲ್ಯ ಅವರ ಪತ್ರಕರ್ತ ಪ್ರವೃತ್ತಿಯಲ್ಲಿ ತುಂಬಾ ನೆರವಿಗೆ ಬಂತು. ಗಾಂಧಿ ತಮ್ಮ ಖಚಿತ ನಿಲುವುಗಳನ್ನು ಪತ್ರಿಕೆಯಲ್ಲಿ ನೇರವಾಗಿ ಮತ್ತು ದಿಟ್ಟವಾಗಿ ಬರೆಯುತ್ತಿದ್ದರು. ತಮ್ಮ ಲೇಖನಗಳಿಗೆ ಅವರು ಕೌಶಲ್ಯ ಭರಿತ ಬರವಣಿಗೆಯ ಯಾವ ಮುಸುಕನ್ನೂ ಹಾಕುತ್ತಿರಲಿಲ್ಲ. ತಮ್ಮ ಮನಸ್ಸಿನಲ್ಲಿ ಏನಿದೆಯೋ ಅದು ಓದುಗರಿಗೆ ಗೊಂದಲವಿಲ್ಲದೆ ತಲುಪ ಬೇಕು ಎನ್ನುವುದು ಗಾಂಧಿ ನಿಲುವಾಗಿತ್ತು. ಇದನ್ನು ಅವರು ಜೀವನಪೂರ್ತಿ ತಮ್ಮ ಬದುಕಿನ ಎಲ್ಲ ಮಗ್ಗುಲುಗಳಲ್ಲಿಯೂ ಅನುಸರಿಸಿಕೊಂಡೇ ಬಂದಿರುವುದನ್ನು ನಾವು ಗಮನಿಸಬಹುದು.

ಈ ಎರಡೂ ಪತ್ರಿಕೆಗಳು ಗಾಂಧಿಯವರ ನಿರೀಕ್ಷೆ ಮೀರಿ ಯಶಸ್ಸು ಗಳಿಸಿದವು. ಒಂದು ಅವಧಿಯಲ್ಲಿ ಈ ಪತ್ರಿಕೆಗಳಿಗೆ ತಲಾ 40,000 ಚಂದಾದಾರರು ಇದ್ದರು ಎಂದು ಗಾಂಧಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಈ ಎರಡೂ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದ ಕಷ್ಟಕಾಲದಲ್ಲಿ ನಮ್ಮ ವಿಚಾರಗಳನ್ನು ಜನರಿಗೆ ತಿಳಿಸುವಲ್ಲಿ ಸಹಾಯಕವಾದವು. ಮಾರ್ಷಲ್ ಲಾ ಕಾನೂನಿನಿಂದ ಉಂಟಾದ ಹಿಂಸೆಯನ್ನು ಕಡಿಮೆ ಮಾಡುವುದರಲ್ಲಿ ಕೈಲಾದ ಸಹಾಯ ಮಾಡಿದವು ಎಂದೇ ಗಾಂಧಿ ತಮ್ಮ ಪತ್ರಿಕೆಗಳ ಬಗ್ಗೆ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಈ ಎರಡೂ ಪತ್ರಿಕೆಗಳ ಯಶಸ್ಸಿನಿಂದ ಉತ್ತೇಜಿತರಾದ ಗಾಂಧಿ 1933 ರ ಸುಮಾರಿಗೆ ಪುಣೆ ನಗರದಿಂದ 'ಹರಿಜನ' ಎನ್ನುವ ಇಂಗ್ಲಿಷ್ ವಾರಪತ್ರಿಕೆಯನ್ನು ಆರಂಭಿಸುತ್ತಾರೆ. ಹರಿಜನ ಸೇವಕ ಸಂಘದವರ ಮುಖವಾಣಿಯಾಗಿದ್ದ ಈ ಪತ್ರಿಕೆಯನ್ನು ಗಾಂಧಿ ಅವರ ಜೊತೆಗೂಡಿ ಮುನ್ನಡೆಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲೇ ಹಿಂದೂ ಧರ್ಮ ಮತ್ತು ಸಮಾಜದ ನಡವಳಿಕೆಯನ್ನು ಸುಧಾರಿಸುವ ಕಾರ್ಯದಲ್ಲಿ ಗಾಂಧಿ ತೊಡಗಿದ್ದನ್ನು ನಾವು ಇಲ್ಲಿ ನೆನಪಿಸಿ ಕೊಳ್ಳ ಬಹುದು. ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಅಂಟಿದ ಮಹಾ ಕಳಂಕ ಎಂದು ಗಾಂಧಿ ಬಹಿರಂಗವಾಗಿಯೇ ಎಲ್ಲೆಡೆ ಹೇಳುತ್ತಿದ್ದರು. ಹರಿಜನರಿಗೆ ಪ್ರವೇಶವಿಲ್ಲದ ದೇವಸ್ಥಾನಗಳಿಗೆ ನಾನು ಪ್ರವೇಶಿಸುವುದಿಲ್ಲ ಎಂದು ಹೇಳಿದ್ದಷ್ಟೇ ಅಲ್ಲ ಅದನ್ನು ಅಕ್ಷರಶಃ ಆಚರಿಸುತ್ತಿದ್ದರು. ಭಾರತದ ತಳ ಸಮುದಾಯಗಳ ಬಗ್ಗೆ ಈ ರೀತಿಯ ತಾಯಿ ಕರುಳಿನ ಸಂಬಂಧ ಇಟ್ಟು ಕೊಂಡಿದ್ದ ಗಾಂಧಿ ಇಂಥ ಧರ್ಮ ಸುಧಾರಣಾ ವಿಚಾರಗಳನ್ನು ಜನರಿಗೆ ತಲುಪಿಸುವ ಸಲುವಾಗಿಯೇ ಹರಿಜನ ಪತ್ರಿಕೆಯನ್ನು ಮೀಸಲಾಗಿಟ್ಟಿದ್ದರು. ಹರಿಜನ ಇಂಗ್ಲಿಷ್ ಪತ್ರಿಕೆಯನ್ನು ಗುಜರಾತಿ ಭಾಷೆಯಲ್ಲಿ 'ಹರಿಜನ ಬಂಧು' ಮತ್ತು ಹಿಂದಿ ಭಾಷೆಯಲ್ಲಿ 'ಹರಿಜನ ಪೋಷಕ' ಎನ್ನುವ ಹೆಸರಿನಲ್ಲಿ ಸಹ ಪ್ರಕಟಿಸಲಾಗುತ್ತಿತ್ತು.

'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳು ಆರಂಭವಾಗುವುದಕ್ಕೆ ಸ್ವಲ್ಪ ಮುಂಚೆ 1919 ರ ವರ್ಷದ ಆರಂಭದಲ್ಲಿ ಗಾಂಧಿ 'ಸತ್ಯಾಗ್ರಹ' ಎನ್ನುವ ಹೆಸರಿನ ಸಣ್ಣ

ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಪತ್ರಿಕೆಗಳು ಜನರಿಗೆ ಹೊರೆಯಾಗದಂತೆ ಇರಬೇಕು ಎನ್ನುವುದು ಗಾಂಧಿಯವರ ನಿಲುವಾಗಿತ್ತು. ಅದಕ್ಕಾಗಿ 'ಸತ್ಯಾಗ್ರಹ' ಸಣ್ಣ ಪತ್ರಿಕೆಗೆ ಅವರು ಕೇವಲ ಒಂದು ಪೈಸೆ ಬೆಲೆ ಇಟ್ಟಿದ್ದರು. ಬ್ರಿಟಿಷರ ಪಕ್ಷಪಾತ ಮತ್ತು ಪೂರ್ವಾಗ್ರಹ ಪೀಡಿತ ನೀತಿಯ ವಿರುದ್ಧ ಪ್ರತಿಭಟನೆಯಾಗಿ ಈ ಪತ್ರಿಕೆ ಪ್ರಕಟಗೊಳ್ಳುತ್ತಿತ್ತು. ನೋಂದಣಿಯಾಗದೇ ಪ್ರಕಟವಾಗುತ್ತಿದ್ದ ಈ ಸಣ್ಣಪತ್ರಿಕೆ ಅಲ್ಪಕಾಲ ನಡೆದು ನಿಂತು ಹೋಯಿತು. ಆದಾಗ್ಯೂ ಗಾಂಧಿಯ ಎದೆಯಲ್ಲಿ ಯಾವಾಗಲೂ ಈ ರೀತಿಯ ಪತ್ರಕರ್ತ ಸದಾ ಕುಳಿತು ಅವಕಾಶ ಸಿಕ್ಕಿದಾಗಲೆಲ್ಲಾ ಜಾಗೃತಗೊಂಡು ಸಮಾಜ ಸೇವೆಗೆ ಎದ್ದು ನಿಲ್ಲುತ್ತಿದ್ದುದನ್ನು 'ಸತ್ಯಾಗ್ರಹ' ಎನ್ನುವ ಸಣ್ಣ ಪತ್ರಿಕೆಯ ಪ್ರಕಟಣೆಯಲ್ಲಿ ನಾವು ಗುರುತಿಸಬಹುದು.

ಗಾಂಧೀಜಿ ತಮ್ಮ ಪತ್ರಕರ್ತ ಪ್ರವೃತ್ತಿ ಹಾಗೂ ತಾವು ಹೊರತರುತ್ತಿದ್ದ ಪತ್ರಿಕೆಗಳ ಬಗ್ಗೆ ತಮ್ಮ ಆತ್ಮಕಥೆ "ನನ್ನ ಸತ್ಯಾನ್ವೇಷಣೆ" ಯಲ್ಲಿ ಹೀಗೆ ಹೇಳುತ್ತಾರೆ :

"ಪತ್ರಿಕೆಗಳು ನನ್ನ ಹತೋಟಿಯಲ್ಲಿ ಇರುವವರೆಗೂ ಪತ್ರಿಕೆಗಳಲ್ಲಿ ಉಂಟಾದ ಬದಲಾವಣೆಗಳು ನನ್ನ ಜೀವನದಲ್ಲಿ ಉಂಟಾದ ಬದಲಾವಣೆಯ ಸೂಚಕಗಳಾಗಿದ್ದವು. ಅಂದಿನ 'ಇಂಡಿಯನ್ ಒಪೀನಿಯನ್' ಇಂದಿನ 'ಯಂಗ್ ಇಂಡಿಯಾ' ಮತ್ತು 'ನವಜೀವನ' ದಂತೆ ಅವು ನನ್ನ ಜೀವನದ ಒಂದು ಅಂಶದ ಕನ್ನಡಿಗಳಾಗಿದ್ದವು . ವಾರ ವಾರವೂ ಪತ್ರಿಕೆಗಳ ಮೂಲಕ ನನ್ನ ಅಂತರಂಗವನ್ನು ಹರಿಸಿ ನನಗೆ ತೋರಿದ ರೀತಿಯಲ್ಲಿ ಸತ್ಯಾಗ್ರಹದ ತತ್ವವನ್ನೂ ಆಚರಣೆಯನ್ನೂ ವಿವರಿಸುತ್ತಿದ್ದೆ. ಯೋಚನೆ ಮಾಡದೆ, ವಿಚಾರ ಮಾಡದೆ ಬರೆದ ಒಂದು ಮಾತಾಗಲಿ, ಉದ್ದೇಶಪೂರ್ವಕವಾದ ಅತಿಶಯೋಕ್ತಿಯಾಗಲಿ ಅಥವಾ ಸುಮ್ಮನೆ ಯಾರನ್ನಾದರೂ ಸಂತೋಷಪಡಿಸುವುದಕ್ಕಾಗಲಿ ಯಾವುದನ್ನೂ ಪತ್ರಿಕೆಗಳಲ್ಲಿ ಬರೆದದ್ದು ನನಗೆ ನೆನಪಿಲ್ಲ. ಪತ್ರಿಕೆ ನಿಜವಾಗಿ ನನಗೆ ಆತ್ಮಸಂಯಮದ ಪ್ರಯೋಗ ಕ್ಷೇತ್ರವಾಯಿತು. ಸ್ನೇಹಿತರಿಗೆ ನನ್ನ ವಿಚಾರಗಳನ್ನು ತಿಳಿಸುವ ಮಾಧ್ಯಮವಾಯಿತು. 'ಇಂಡಿಯನ್ ಒಪೀನಿಯನ್' ಇಲ್ಲದಿದ್ದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಹುಶಃ ಸತ್ಯಾಗ್ರಹವೇ ಸಾಧ್ಯವಾಗುತ್ತಿರಲಿಲ್ಲ. ವಾಚಕರು, ನಂಬಿಕೆಗೆ ಅರ್ಹವಾದ ಸತ್ಯಾಗ್ರಹ, ಚಳವಳಿಯ ವರದಿಗಾಗಿ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ನಿಜವಾದ ಸ್ಥಿತಿಯನ್ನು ತಿಳಿಯುವುದಕ್ಕೆ ಈ ಪತ್ರಿಕೆಯನ್ನು ಎದುರು ನೋಡುತ್ತಿದ್ದರು. ನನಗೆ ಈ ಪತ್ರಿಕೆ ಮನುಷ್ಯರ ಸ್ವಭಾವದ ಬೇರೆ ಬೇರೆ ಮಾದರಿಗಳನ್ನು ಮತ್ತು ಛಾಯೆಗಳನ್ನು ಅಭ್ಯಸಿಸುವ ಒಂದು ಸಾಧನವಾಯಿತು.

"ಯಾವಾಗಲೂ ಸಂಪಾದಕರು ಮತ್ತು ವಾಚಕರ ನಡುವೆ ಆತ್ಮೀಯವಾದ ಮತ್ತು ಸ್ವಚ್ಛವಾದ ಸಂಬಂಧವನ್ನು ಏರ್ಪಡಿಸುವುದು ನನ್ನ ಗುರಿಯಾಗಿತ್ತು. ವಾಚಕರ ಹೃದಯಾಂತರಾಳದಿಂದ ಹೊರಡುವ ಭಾವಗಳನ್ನೊಳಗೊಂಡ ಪತ್ರಗಳ ಮಳೆ ನನ್ನ ಮೇಲೆ ಸುರಿಯುತ್ತಿತ್ತು . ಅವು ಬರೆದವರ ಮನೋಭಾವಕ್ಕೆ ಅನುಗುಣವಾಗಿ ಮಿತ್ರ ಭಾವವನ್ನೋ , ಟೀಕೆಯನ್ನೋ , ಕಟುಭಾವವನ್ನೋ ಸೂಚಿಸುತ್ತಿದ್ದವು. ಇವುಗಳನ್ನೆಲ್ಲ ಚೆನ್ನಾಗಿ ಓದಿ ಅರಗಿಸಿಕೊಂಡು ಪ್ರತ್ಯುತ್ತರ ನೀಡುವುದು ನನಗೆ ಸೊಗಸಾದ ಶಿಕ್ಷಣವಾಯಿತು. ನಮ್ಮ ಜನರು ಈ ಪತ್ರ ಲೇಖನಗಳ ಮೂಲಕ ನನ್ನ ಜೊತೆಯಲ್ಲಿ ಗಟ್ಟಿಯಾಗಿ ಆಲೋಚಿಸುತ್ತಿರುವಂತೆ ತೋರಿತು. ಇದರಿಂದ ನನಗೆ ಪತ್ರಕರ್ತನ ಜವಾಬ್ದಾರಿ ಚೆನ್ನಾಗಿ ಅರ್ಥವಾಯಿತು. ಹೀಗೆ ,ನಾನು ನಮ್ಮ ಜನರ ಮೇಲೆ ಹೊಂದಿದ ಹಿಡಿತದಿಂದಾಗಿ ಮುಂದಿನ ಸತ್ಯಾಗ್ರಹ ಸಂಗ್ರಾಮವು ಕಾರ್ಯಶೀಲವಾಗಿ ಘನತೆಯಿಂದ ಕೂಡಿ ಬ್ರಿಟಿಷರನ್ನು ಎದುರಿಸಲು ಶಕ್ತವಾಯಿತು .

' ಇಂಡಿಯನ್ ಒಪೀನಿಯನ್' ಆರಂಭವಾದ ಒಂದು ತಿಂಗಳಿನ ಒಳಗೇ ; ವೃತ್ತಪತ್ರಿಕೆಗಳ ಒಂದೇ ಗುರಿ ಸೇವೆಯಾಗಿರಬೇಕೆಂಬುದನ್ನು ನಾನು ಅರಿತೆ . ವೃತ್ತಪತ್ರಿಕೆ ಒಂದು ದೊಡ್ಡ ಶಕ್ತಿ. ಆದರೆ ಹತೋಟಿಯಿಲ್ಲದ ನೀರಿನ ಪ್ರವಾಹವು ಹಳ್ಳಿಗಳನ್ನೆಲ್ಲ ಮುಳುಗಿಸಿ ಪೈರನ್ನು ನಾಶ ಮಾಡುವಂತೆ ಹಿಡಿತವಿಲ್ಲದ ಲೇಖನಿ ಸಹ ನಾಶಕ್ಕೆ ಸಾಧನವಾಗುತ್ತದೆ. ಹೊರಗಿನ ಹತೋಟಿಯು ,ಯಾವುದೇ ಹತೋಟಿ ಇಲ್ಲದಿರುವುದಕ್ಕಿಂತ ಹೆಚ್ಚಿನ ಅಪಾಯವನ್ನು ತರುತ್ತದೆ. ಒಳಗಿನ ಅಂಕುಶ ಒಳಗಿನಿಂದಲೇ ಬಂದಾಗ ಮಾತ್ರ ಲಾಭದಾಯಕವಾಗಬಲ್ಲದು.

ಈ ವಿಚಾರ ಸರಣಿ ಸರಿ ಎನ್ನುವುದಾದರೆ ಪ್ರಪಂಚದಲ್ಲಿ ಎಷ್ಟು ಪತ್ರಿಕೆಗಳು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬಲ್ಲವು ? ಆದರೆ ಅಪ್ರಯೋಜಕ ಪತ್ರಿಕೆಗಳನ್ನು ನಿಲ್ಲಿಸುವವರು ಯಾರು ? ಅಪ್ರಯೋಜಕವೆಂದು ತೀರ್ಮಾನಿಸುವವರು ಯಾರು ? ಪ್ರಪಂಚದಲ್ಲಿ ಪ್ರಯೋಜನಕರವಾದವುಗಳು ಮತ್ತು , ಅಪ್ರಯೋಜಕವಾದವುಗಳು ; ಒಳ್ಳೆಯದು ಮತ್ತು ಕೆಟ್ಟದ್ದು ಇರುವಂತೆ ಒಟ್ಟಿಗೆಯೇ ಇರುತ್ತವೆ. ಇವುಗಳಲ್ಲಿ ಮನುಷ್ಯ ತನಗೆ ಬೇಕಾದುದನ್ನು ಆರಿಸಿಕೊಳ್ಳಬೇಕು. "

ಗಾಂಧೀಜಿಗೆ ಬರವಣಿಗೆ ಸದಾ ಒಂದು ಆಸಕ್ತಿ ಹಾಗೂ ಆಕರ್ಷಣೀಯ ಕಲೆಯಾಗಿತ್ತು. ಅವರು ತಮ್ಮ ಇಡೀ ಬದುಕಿನಲ್ಲಿ ಹೋರಾಟದ ಜೊತೆ ಜೊತೆಗೆ ಬರವಣಿಗೆ ಮಾಡಿದ್ದೇ ಹೆಚ್ಚು .ಅದು ಪತ್ರಿಕೋದ್ಯಮ ಇರಬಹುದು , ವಿವಿಧ ವಿಷಯಗಳ ಬಗ್ಗೆ ಬರೆದ ಲೇಖನ ಮಾಲಿಕೆ ಇರಬಹುದು ಅಥವಾ ಜನಸಾಮಾನ್ಯರಿಗೆ , ರಾಜಕೀಯ ಮುಖಂಡರುಗಳಿಗೆ ಮತ್ತು ವಿಶ್ವ ನಾಯಕರುಗಳಿಗೆ ಬರೆದ ಪತ್ರಗಳಿರಬಹುದು ಎಲ್ಲ ಬರವಣಿಗೆಗಳಲ್ಲಿ ಒಂದು ಸರಳತೆ ಮತ್ತು ಖಚಿತತೆ ಹಾಗು ನಿಷ್ಪಕ್ಷಪಾತವಾದ ನಿಲುವು ಇರುತ್ತಿತ್ತು.ಅದು ಗಾಂಧೀಜಿಯ ಬರವಣಿಗೆಯ ವೈಶಿಷ್ಟ್ಯತೆ.

ಗಾಂಧೀಜಿಯವರು 1921 ರಲ್ಲಿ ಬರೆದ ತಮ್ಮ "ಹಿಂದ್ ಸ್ವರಾಜ್'. ಕಿರುಪುಸ್ತಕದಲ್ಲಿ ಪತ್ರಿಕೋದ್ಯಮದ ಮೂರು ಪ್ರಮುಖ ಉದ್ದೇಶಗಳನ್ನು ಹೀಗೆ ಹೇಳಿದ್ದಾರೆ.

- **ಜನರಿಗೆ ಇಷ್ಟವಾದ ಜನಾಭಿಪ್ರಾಯಗಳು ಮತ್ತು ಚಿಂತನೆಗಳನ್ನು ಅರ್ಥ ಮಾಡಿಕೊಂಡು ಅದನ್ನು ಅಭಿವ್ಯಕ್ತಿಗೊಳಿಸುವುದು.**
- **ರಾಷ್ಟ್ರೀಯ ಐತಿಹಾಸಿಕ ಮತ್ತು ಆಧ್ಯಾತ್ಮಿಕ ಭಾವನೆಗಳನ್ನು ಜನರಲ್ಲಿ ಉದ್ದೀಪನಗೊಳಿಸುವುದು .**
- **ತಪ್ಪುಗಳ ಬಗ್ಗೆ ನಿರ್ಭೀತಿಯಿಂದ ಬರೆಯುವುದು .**

ಗಾಂಧೀಜಿಯವರು ಹಿಂದ್ ಸ್ವರಾಜ್ ಕಿರು ಹೊತ್ತಿಗೆಯಲ್ಲಿ ಹೇಳಿರುವ ಪತ್ರಿಕೋದ್ಯಮದ ಈ ಮೂರು ಮೂಲ ಉದ್ದೇಶಗಳು ಇಂದಿಗೂ ಪ್ರಸ್ತುತವಾಗಿವೆ. ನಮ್ಮ ಮಾಧ್ಯಮಗಳು ಅವುಗಳನ್ನು ಅರಿತು ನಡೆಯಲಿ ಎನ್ನುವುದು ನಮ್ಮ ಆಶಯ.

('ವಿವೇಕಯುಗ' ಸಂಸ್ಥೆಯ ಗಾಂಧಿ ಸ್ಮರಣ ಸಂಚಿಕೆಗಾಗಿ ಬರೆದ ಲೇಖನ)



ಅಪೂರ್ವ ಪ್ರೇಮಿಗಳ ಕಥನ

– ಜಗದೀಶ್ ಕೊಪ್ಪ

ಡಾ.ಸೌಂದರ್ಯಂ , ಮತ್ತು ಜಿ ರಾಮಚಂದ್ರನ್

ಗಾಂಧೀಜಿಯವರನ್ನು ಹಿಂದೂವಾದಿ, ಆಸ್ತಿಕ, ಸಂಪ್ರದಾಯವಾದಿ ಹೀಗೆ ಅನೇಕ ಬಿರುದುಗಳನ್ನು ನೀಡಿ ಟೀಕಿಸುವವರು ಗಮನಿಸಬೇಕಾದ ಸಂಗತಿ ಒಂದಿದೆ. ಅವರು ಎಂದಿಗೂ ಅಂತರ್ಜಾತಿಯ ವಿವಾಹಗಳನ್ನು ಹೊರತು ಪಡಿಸಿ, ಇತರೆ ಸಾಂಪ್ರದಾಯಿಕ ವಿವಾಹಗಳಲ್ಲಿ ಭಾಗವಹಿಸಲಿಲ್ಲ. ತಮ್ಮ ಸೇವಾಗ್ರಾಮದಲ್ಲಿ ಅನೇಕ ಅಂತರ್ಜಾತಿಯ ವಿವಾಹಗಳನ್ನು ನೆರವೇರಿಸಿದರು. ಜೊತೆಗೆ ಹರಿಜನರಿಗೆ ಪ್ರವೇಶವಿಲ್ಲದ ಯಾವುದೇ ದೇವಾಲಯಗಳಿಗೆ ತಮ್ಮ ಜೀವಿತದಲ್ಲಿ ಪ್ರವೇಶ ಮಾಡಲಿಲ್ಲ. ಇಂತಹ ಮಹಾತ್ಮನು ತಮಿಳುನಾಡಿನ ಅಯ್ಯಂಗಾರ್ ಸಮುದಾಯದ ಬಾಲ ವಿಧವೆ ಮತ್ತು ಕೇರಳದ ಶೂದ್ರ ಸಮುದಾಯದ ಯುವಕನಿಗೆ ವಿವಾಹ ಮಾಡಿಸಿದ ಅಪರೂಪದ ಘಟನೆಯಿದು.

ತಮಿಳುನಾಡಿನ ಪ್ರಸಿದ್ಧ ಉದ್ಯಮಿ ಹಾಗೂ ಟಿ.ವಿ.ಎಸ್. ಕಂಪನಿಯ ಸಂಸ್ಥಾಪಕರಾದ ಸುಂದರಂ ಅಯ್ಯಂಗಾರ್ ಅವರ ಪುತ್ರಿ ಟಿ.ವಿ. ಸೌಂದರ್ಯಂ ಅವರಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಹದಿನಾಲ್ಕನೆಯ ವಯಸ್ಸಿಗೆ ವಿವಾಹವಾಗಿತ್ತು. ಆದರೆ, ಅವರ ಪತಿ ಸುಂದರ್ ರಾಜನ್ ಎಂಬುವರು ವಿವಾಹವಾದ ವರ್ಷದಲ್ಲಿ ಅನಾರೋಗ್ಯದಿಂದ ಮೃತ ಪಟ್ಟರು.

ತಾವು ಸಾಯುವ ಮುನ್ನ ' ನೀನು ಜೀವನ ಪೂರ್ತಿ ವಿಧವೆಯಾಗಿ ಕಾಲ ಕಳೆಯಬೇಡ. ಮರು ವಿವಾಹವಾಗಿ ಬದುಕು ಕಟ್ಟಿಕೊ' ಎಂಬ ಮಾತನ್ನು ಸೌಂದರ್ಯಂ ಅವರಿಗೆ ಹೇಳಿ ಪ್ರಾಣ ಬಿಟ್ಟಿದ್ದರು. ಆನಂತರ ಸೌಂದರ್ಯಂ ಅವರ ತಂದೆ ಟಿ.ವಿ.ಸುಂದರಂ ಅಯ್ಯಂಗಾರ್ ಅವರು ತಮ್ಮ ಪುತ್ರಿಯನ್ನು 1930 ರ ದಶಕದಲ್ಲಿ ದೆಹಲಿಗೆ ಕಳುಹಿಸಿ ಎಂ.ಬಿ.ಬಿ.ಎಸ್. ಪದವಿ ಅಧ್ಯಯನಕ್ಕೆ ಸೇರಿಸಿದ್ದರು.

ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಪ್ಯಾರೇಲಾಲ್ ಅವರಿಗೆ ಸಹೋದರಿಯಂತಿದ್ದ ಡಾ.ಸುಶೀಲಾ ನಯ್ಯರ್ ಅವರು ಸೌಂದರ್ಯಂ ಅವರ ಸಹಪಾಠಿಯಾಗಿದ್ದರು. ಹಾಗಾಗಿ ಗಾಂಧೀಜಿಯವರ ಆರೋಗ್ಯ ನೋಡಿಕೊಳ್ಳುತ್ತಿದ್ದ ಡಾ.ಸುಶೀಲಾ ನಯ್ಯರ್ ಜೊತೆ ಗಾಂಧೀಜಿಯವರ ಪರಿಚಯವಾಗಿ ಅವರ ನಿಕಟ ಒಡನಾಡಿಯಾಗಿ ಡಾ.ಟಿ.ವಿ.ಸೌಂದರ್ಯಂ ಎಲ್ಲರಿಗೂ ಪರಿಚಿತರಾಗಿದ್ದರು.

ಇತ್ತ ಕೇರಳದ ತಿರುವನಂತಪುರ ಸಮೀಪದ ನಾಯಟ್ಟಿನಕರ ಎಂಬ ಸ್ಥಳದಲ್ಲಿ ಜನಿಸಿದ ಜಿ.ರಾಮಚಂದ್ರನ್ ಅವರು 1924 ರಲ್ಲಿ ಪಶ್ಚಿಮ ಬಂಗಾಳದ ಶಾಂತನಿಕೇತನದ ವಿಶ್ವ ಭಾರತಿ ವಿಶ್ವ ವಿದ್ಯಾನಿಲಯದಲ್ಲಿ ಬಿ.ಎ.ಆನರ್ಸ್ ಪದವಿ ಪಡೆದಿದ್ದರು. ಗಾಂಧೀಜಿಯವರ ಆಪ್ತ ಮಿತ್ರ ಸಿ.ಎಫ್ . ಆಂಡ್ರೂಸ್ ಅವರು ಗಾಂಧೀಜಿಯವರ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು ರವೀಂದ್ರನಾಥ್ ಟ್ಯಾಗೋರ್ ಆಹ್ವಾನದ ಮೇರೆಗೆ ಶಾಂತಿನಿಕೇತನದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಆಂಡ್ರೂಸ್ ಅವರ ಪರಮ ಶಿಷ್ಯರಾಗಿದ್ದ ಜಿ.ರಾಮಚಂದ್ರನ್ ಅವರಿಗೆ ತಮ್ಮ ಗುರುವಿನ ಮೂಲಕ ಗಾಂಧೀಜಿಯವರ ಪರಿಚಯವಾಗಿತ್ತು, ಅವರು ಪದವಿ ಮುಗಿಸಿದ ನಂತರ ಗುರುವಿನ ಜೊತೆ ಗಾಂಧಿ ಅನುಯಾಯಿಗಳಾಗಿದ್ದರು. ಆಗ ತಾನೇ ಆಲಿಗಡ್ ನಲ್ಲಿ ಡಾ,ಝಾಕಿರ್ ಹುಸೈನ್ ನೇತೃತ್ವದಲ್ಲಿ ಆರಂಭವಾಗಿದ್ದ ಜಾಮಿಯ ಮಿಲ್ಲಿಯಾ ಇಸ್ಲಾಮಿಯ ವಿಶ್ವ ವಿದ್ಯಾನಿಲಯದಲ್ಲಿ ಗಾಂಧೀಜಿಯವರು 1936 ರಲ್ಲಿ ಜಿ.ರಾಮಚಂದ್ರನ್ ಗೆ ಉಪನ್ಯಾಸಕ ವೃತ್ತಿಯನ್ನು ಕೊಡಿಸಿದ್ದರು.

ಗಾಂಧೀಜಿಯವರ ಅನುಯಾಯಿಗಳಾಗಿ ಅವರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಡಾ.ಸೌಂದರ್ಯಂ ಮತ್ತು ಜಿ.ರಾಮಚಂದ್ರನ್ ಇಬ್ಬರೂ ದಕ್ಷಿಣ ಭಾರತೀಯರಾಗಿದ್ದ ಕಾರಣ ಬಹು ಬೇಗ ಪರಿಚಿತರಾದರು. ಅವರ ಈ ಪರಿಚಯ ಪ್ರೀತಿಯತ್ತ ತಿರುಗಿತು. ಈ ವಿಷಯವನ್ನು ಗಾಂಧೀಜಿಯವರಿಗೆ ತಿಳಿಸಿ ವಿವಾಹಕ್ಕೆ ಅನುಮತಿ ಕೋರುವುದರ ಜೊತೆಗೆ ಅಂತರ್ಜಾತಿಯ ವಿವಾಹಕ್ಕೆ ತಮ್ಮ ತಂದೆ ಸುಂದರಂ ಅಯ್ಯಂಗಾರ್ ಅವರನ್ನು ಒಪ್ಪಿಸುವಂತೆ ಡಾ. ಸೌಂದರ್ಯಂ ಗಾಂಧೀಜಿಯವರಲ್ಲಿ ವಿನಂತಿಸಿಕೊಂಡರು.

ಮಹಾತ್ಮ ಗಾಂಧೀಜಿಯವರು ಪ್ರೇಮಿಗಳಿಬ್ಬರಿಗೂ ಒಂದು ಷರತ್ತು ವಿಧಿಸಿದರು. ಒಂದು ವರ್ಷ ಕಾಲ ಪ್ರೇಮಿಗಳಿಬ್ಬರೂ ಪರಸ್ಪರ ಭೇಟಿ ಮಾಡಬಾರದು ಮತ್ತು ಮಾತನಾಡಬಾರದು. ಪತ್ರಗಳ ಚಟುವಟಿಕೆಯೂ ಇರಬಾರದು ಎಂದು ಹೇಳಿದರು. ಅದರಂತೆ ಇಬ್ಬರೂ ಒಂದು ವರ್ಷ ದೂರ ಉಳಿದು ನಂತರ

ಬಾಪೂ ಅವರನ್ನು ಭೇಟಿಯಾಗಿ ನಮ್ಮಲ್ಲಿ ಪ್ರೀತಿ ಶಾಶ್ವತವಾಗಿ ಉಳಿದಿದೆ. ಇದು ತಾತ್ಕಾಲಿಕ ಪ್ರೀತಿ ಅಥವಾ ಪ್ರೇಮ ಅಲ್ಲ ಎಂಬುದನ್ನು ಸಾಬೀತು ಪಡಿಸಿದರು. ಈ ಪ್ರೇಮಿಗಳ ನೈಜ ಪ್ರೀತಿಯನ್ನು ಮನಗಂಡ ಗಾಂಧೀಜಿಯವರು ತಾವೇ ಸ್ವತಃ ಮದ್ರಾಸ್ ನಗರಕ್ಕೆ ಆಗಮಿಸಿ ಡಾ.ಸೌಂದರ್ಯಂ ಅವರ ತಂದೆ ಟಿ.ವಿ.ಸುಂದರಂ ಅಯ್ಯಂಗಾರ್ ಅವರ ಮನವೊಲಿಸಿದರು.

1940 ರಲ್ಲಿ ವಾರ್ಧಾ ಬಳಿಯ ಸೇವಾಗ್ರಾಮದಲ್ಲಿ ಈ ಇಬ್ಬರು ಪ್ರೇಮಿಗಳಿಗೆ ತಾವೇ ಪೋಷಕರಾಗಿ ನಿಂತು ವಿವಾಹ ನೆರವೇರಿಸಿ, ಆಶೀರ್ವದಿಸಿ ಕಳಿಸಿಕೊಟ್ಟರು. ನಂತರ ಈ ದಂಪತಿಗಳು ತಮಿಳುನಾಡಿಗೆ ಬಂದು ದಿಂಡಿಗಲ್ ಬಳಿ ಭೂಮಿಯನ್ನು ಖರೀದಿಸಿ ' ಗ್ರಾಂಧಿ ಗ್ರಾಮ ' ಎಂಬ ಹೆಸರಿನಲ್ಲಿ ಗುಡಿ ಕೈಗಾರಿಕೆ ಚಟುವಟಿಕೆಯನ್ನು ಆರಂಭಿಸಿ ಗಾಂಧೀಜಿಯವರ ಗ್ರಾಮ ಭಾರತದ ಕನಸನ್ನು ನೆರವೇರಿಸಲು ಶ್ರಮಿಸಿದರು. ಇದೀಗ ಗಾಂಧಿ ಗ್ರಾಮವು ' ಗಾಂಧಿ ವಿಶ್ವ ವಿದ್ಯಾನಿಲಯವಾಗಿ' ಬೆಳೆದಿದೆ. 1984 ರಲ್ಲಿ ಡಾ.ಸೌಂದರ್ಯಂ ನಿಧನರಾದರು.

ಪತ್ನಿಯ ನಿಧನದ ನಂತರ ಜಿ.ರಾಮಚಂದ್ರನ್ ಅವರು ಹುಟ್ಟೂರಾದ ಕೇರಳಕ್ಕೆ ಬಂದು ತಾವು ಹುಟ್ಟಿ ಬೆಳೆದ ಮನೆಯನ್ನು ಗಾಂಧಿ ಸ್ಮಾರಕವನ್ನಾಗಿ ಪರಿವರ್ತಿಸಿ ಅಲ್ಲಿಯೂ ಸಹ ಅನೇಕ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದರು. ರಾಜ್ಯ ಸಭೆಯ ಸದಸ್ಯರಾಗಿ ಭಾರತ ಸರ್ಕಾರದ ಪರವಾಗಿ ವಿಶ್ವ ಸಂಸ್ಥೆ ಸೇರಿದಂತೆ ಅನೇಕ ಕಡೆ ಕಾರ್ಯ ನಿರ್ವಹಿಸಿದ ರಾಮಚಂದ್ರನ್ 1995 ರಲ್ಲಿ ನಿಧನರಾದರು.

ನಾನು ಮಧುರೈ ಅಥವಾ ಕನ್ಯಾಕುಮಾರಿಯ ಕಡೆ ಹೋಗುವಾಗ ದಿಂಡಿಗಲ್ ರೈಲ್ವೆ ನಿಲ್ದಾಣ ದಾಟುತ್ತಿದ್ದಂತೆ ಕಾಣುವ ಗಾಂಧಿ ವಿಶ್ವ ವಿದ್ಯಾನಿಲಯ ಮತ್ತು ಕನ್ಯಾಕುಮಾರಿ – ತಿರುವಂತಪುರ ನಡುವಿನ 60 ಕಿ.ಮಿ.ರಸ್ತೆಯ ನಡುವೆ ಸಿಗುವ ನಾಯಟ್ಟಿನಕರ ಊರು ಸಿಕ್ಕಾಗ ತಕ್ಷಣ ನನಗೆ ಈ ಅಪೂರ್ವ ದಂಪತಿಗಳು ನೆನಪಾಗುತ್ತಾರೆ.

(2018 ರಲ್ಲಿ ಸಪ್ನ ಬುಕ್ ಹೌಸ್ ಸಂಸ್ಥೆಯಿಂದ ಪ್ರಕಟವಾಗಿ ಈಗಾಗಲೇ ಮೂರು ಮುದ್ರಣ ಕಂಡಿರುವ ನನ್ನ ಕೃತಿ ' ಗಾಂಧಿಗಿರಿಯ ಫಸಲುಗಳು' ಪುಸ್ತಕದಿಂದ ಆಯ್ದ ಸಂಕ್ಷಿಪ್ತ ಕಥನ) ■

"ನೀವು ಆಲೋಚಿಸುವ,
ಹೇಳುವ ಮತ್ತು ಮಾಡುವ
ಕ್ರಿಯೆಯಲ್ಲಿ ಸಾಮರಸ್ಯ
ಇದ್ದಲ್ಲಿ ಅದೇ ಸಂತೋಷದ ಘಳಿಗೆ."
~ ಮಹಾತ್ಮ ಗಾಂಧಿ





ಮಹಾತ್ಮ ಗಾಂಧೀಜಿಯವರನ್ನು ಕೊಂದವರು ಯಾರು?

–ದಿನೇಶ್ ಅಮೀನ್ ಮಟ್ಟು

'ದೇವರ ದಯೆಯಿಂದ ಏಳು ಬಾರಿ ನಾನು ಸಾವಿನ ದವಡೆಯಿಂದ ಪಾರಾಗಿ ಬಂದಿದ್ದೇನೆ. ನಾನು ಯಾರನ್ನೂ ನೋಯಿಸಿಲ್ಲ. ಯಾರನ್ನೂ ನನ್ನ ಶತ್ರು ಎಂದು ತಿಳಿದುಕೊಂಡಿಲ್ಲ.

ಹೀಗಿದ್ದರೂ ಯಾಕೆ ನನ್ನ ಹತ್ಯೆಗೆ ಪ್ರಯತ್ನ ನಡೆಯುತ್ತಿದೆ ಎಂದು ಗೊತ್ತಾಗುತ್ತಿಲ್ಲ. ನಾನು ಸಾಯುವುದಿಲ್ಲ, 125 ವರ್ಷ ಬದುಕುತ್ತೇನೆ...~– ತಮ್ಮ ಹತ್ಯೆಗೆ ಏಳನೇ ಬಾರಿ ನಡೆದ ಪ್ರಯತ್ನ ವಿಫಲಗೊಂಡ ನಂತರ 1946ರ ಜೂನ್ 30ರಂದು ಗಾಂಧೀಜಿ ಪುಣೆಯ ಬಹಿರಂಗ ಸಭೆಯಲ್ಲಿ ನೋವು ತುಂಬಿದ್ದ ದನಿಯಲ್ಲಿ ಈ ಮಾತು ಹೇಳಿದ್ದರು. ಆ ಘಟನೆ ನಡೆದ ನಂತರ 1948ರ ಜನವರಿ 21ರಂದು ದೆಹಲಿಯ ಬಿರ್ಲಾ ಭವನದಲ್ಲಿಯೇ ಗಾಂಧೀಜಿ ಹತ್ಯೆಗೆ ಮತ್ತೊಂದು ಪ್ರಯತ್ನ ನಡೆದಿತ್ತು. ಅದರಿಂದಲೂ ಅವರು ಪಾರಾಗಿದ್ದರು. ಕೊನೆಗೆ 1948ರ ಜನವರಿ 30ರಂದು ಅವರು ಸಾವಿಗೆ ಶರಣಾದರು.

ಪ್ರಾಣದ ಆಸೆ ಇಲ್ಲದ ಕೊಲೆಗಡುಕ, ಕೊಲೆ ಮಾಡುವುದನ್ನು ತಡೆಯುವುದು ಎಷ್ಟು ಕಷ್ಟವೋ, ಪ್ರಾಣದ ಆಸೆ ಇಲ್ಲದ ವ್ಯಕ್ತಿಯನ್ನು ಕೊಲೆಗಡುಕನಿಂದ ಉಳಿಸಿಕೊಳ್ಳುವುದು ಅಷ್ಟೇ ಕಷ್ಟ. ಗಾಂಧೀಜಿ ಹತ್ಯೆ ನಡೆಯುವ ಹೊತ್ತಿಗೆ ಕೊಲೆಗಡುಕ ನಾಥುರಾಮ್ ಗೋಡ್ಸೆ ಮಾತ್ರವಲ್ಲ, ಕೊಲೆಯಾಗಿದ್ದ ಗಾಂಧೀಜಿ ಕೂಡಾ ಬದುಕುವ ಆಸೆಯನ್ನು ಕಳೆದುಕೊಂಡಿದ್ದರು.

ಅವರ ಹತ್ಯೆಯ ದಿನವೇ ತನ್ನೆರಡು 'ಊರುಗೋಲು~ಗಳಾದ ಆಭಾ ಮತ್ತು ಮನು ಜತೆ ಮಾತನಾಡುತ್ತಾ ಒಂದಲ್ಲ ಎರಡು ಬಾರಿ ತನ್ನ ಸಾವಿನ ಬಗ್ಗೆ ಗಾಂಧೀಜಿ ಮಾತನಾಡಿದ್ದರು. ತಾನು ನಂಬಿದವರೇ ತನ್ನ ಜತೆ ಇಲ್ಲವೇನೋ ಎಂಬ ಅನಾಥಪ್ರಜ್ಞೆಯೇ ಅವರಿಂದ ಈ ಮಾತುಗಳನ್ನು ಆಡಿಸಿತ್ತೋ ಏನೋ? ಹಿಂದೆ ಏಳು ಬಾರಿ ಅವರ ಹತ್ಯೆಗೆ ಪ್ರಯತ್ನ ನಡೆದಾಗ ಭಾರತೀಯರು ಶತ್ರುಗಳೆಂದು ತಿಳಿದುಕೊಂಡಿದ್ದ ಬ್ರಿಟಿಷರು ಅಧಿಕಾರದಲ್ಲಿದ್ದರು. ಹಾಗಿದ್ದರೂ ಆ ಪ್ರಯತ್ನಗಳು ವಿಫಲವಾಗಿದ್ದವು.

ಆದರೆ ಅವರ ಹತ್ಯೆ ನಡೆದಾಗ ಅವರ ಶಿಷ್ಯೋತ್ತಮರೇ ಅಧಿಕಾರದಲ್ಲಿದ್ದರು. ಅವರಿಗೂ ಬಾಪುವನ್ನು ಉಳಿಸಿಕೊಳ್ಳಲು ಆಗಲಿಲ್ಲ. ಶಿಷ್ಯಂದಿರ ವರ್ತನೆಯ ಸುಳಿವು ಸಿಕ್ಕಿಯೇ ಗಾಂಧೀಜಿ ಬದುಕುವ ಆಸೆ ಕಳೆದುಕೊಂಡಿದ್ದರೇ?

ಗಾಂಧೀಜಿ ಹತ್ಯೆ ಮುಗಿದ ಅಧ್ಯಾಯ ಎಂದೇ ಹೆಚ್ಚಿನವರು ನಂಬಿದ್ದಾರೆ. ಕೊಲೆಗಡುಕರು ಯಾರೆಂದು ಗೊತ್ತಾಗಿದೆ, ಅವರಿಗೆ ಶಿಕ್ಷೆಯೂ ಆಗಿದೆ, ಇನ್ನೇನು ಎಂದು ಕೇಳುವವರಿದ್ದಾರೆ. ಆದರೆ ನ್ಯಾಯಾಲಯದಲ್ಲಿ ಒಪ್ಪಿಕೊಂಡ ವಿಚಾರವಷ್ಟೇ ಗಾಂಧೀಜಿಯವರನ್ನು ಕೊಲ್ಲಲು ಗೋಡ್ಸೆಗೆ ಪ್ರೇರಣೆ ನೀಡಿತ್ತೇ? ಇಲ್ಲವೇ ಬೇರೆ ಕಾರಣಗಳೂ ಇದ್ದವೇ? ಎಂಬ ಪ್ರಶ್ನೆಗೆ ನ್ಯಾಯಾಲಯದ ತೀರ್ಪಿನಲ್ಲಿ ಉತ್ತರ ಸಿಗುವುದಿಲ್ಲ.

ಹತ್ಯೆಯ ಪ್ರಯತ್ನಗಳು ನಿರಂತರವಾಗಿ

ನಡೆಯುತ್ತಿರುವುದು ಗೊತ್ತಿದ್ದರೂ ಗಾಂಧೀಜಿಯವರನ್ನು ಉಳಿಸಿಕೊಳ್ಳಲು ಅವರ ಅನುಯಾಯಿಗಳಿಗೆ ಯಾಕೆ ಸಾಧ್ಯವಾಗಿಲ್ಲ ಎನ್ನುವ ಪ್ರಶ್ನೆಗೂ ಇನ್ನೂ ಉತ್ತರ ಸಿಕ್ಕಿಲ್ಲ. ಗಾಂಧೀಜಿ ಹತ್ಯೆಗೆ ಸಂಬಂಧಿಸಿದ ಹಲವಾರು ಪುಸ್ತಕಗಳು, ನ್ಯಾಯಾಲಯದಲ್ಲಿನ ವಿಚಾರಣೆಯ ದಾಖಲೆಗಳು ಹಾಗೂ ಕೊಲೆಗಾರರಿಗೆ ಶಿಕ್ಷೆಯಾದ ನಂತರ ಎದ್ದ ವಿವಾದದಿಂದಾಗಿ ಮಹಾರಾಷ್ಟ್ರ ಸರ್ಕಾರವೇ ನೇಮಿಸಿದ ಕಪೂರ್ ಆಯೋಗದ ವರದಿಗಳ ಪುಟಗಳನ್ನು ತಿರುವಿಹಾಕಿದರೆ ಇನ್ನಷ್ಟು ಪ್ರಶ್ನೆಗಳು ಹುಟ್ಟುತ್ತವೆಯೇ ಹೊರತು ಉತ್ತರ ಸಿಗುವುದಿಲ್ಲ.

ಗಾಂಧೀಜಿ ಹತ್ಯೆಗೆ ನಡೆದ ಐದು ಪ್ರಯತ್ನಗಳನ್ನು ದೃಢೀಕರಿಸುವ ದಾಖಲೆಗಳು ಲಭ್ಯ ಇವೆ. ಈ ಐದೂ ಪ್ರಯತ್ನಗಳಲ್ಲಿ ನಾಥುರಾಮ್ ಗೋಡ್ಸೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಭಾಗವಹಿಸಿದ್ದ ಉಲ್ಲೇಖಗಳಿವೆ.

ಈ ಕಾರಣದಿಂದಾಗಿಯೇ ಪೊಲೀಸರು ಆತನನ್ನು ತಡೆಯುವ ಪ್ರಯತ್ನ ಯಾಕೆ ಮಾಡಲಿಲ್ಲ ಎನ್ನುವ ಪ್ರಶ್ನೆ ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ. ಗಾಂಧೀಜಿ ಹತ್ಯೆಗೆ ಮೊದಲ ಪ್ರಯತ್ನ ನಡೆದಿದ್ದು 1934ರ ಜೂನ್ 25ರಂದು ಪುಣೆಯಲ್ಲಿ. 'ಹರಿಜನ ಯಾತ್ರೆ'ಯಲ್ಲಿ ಪಾಲ್ಗೊಳ್ಳಲು ಗಾಂಧೀಜಿ ಅಲ್ಲಿಗೆ ಹೋಗಿದ್ದರು. ಅಲ್ಲಿ ದುಷ್ಕರ್ಮಿಗಳು ಎಸೆದ ಬಾಂಬು ಗಾಂಧಿ ವಿರೋಧಿ ಅಣ್ಣಾಸಾಹೇಬ್ ಬೋಪಟ್ಕರ್ ಕಾರು ಮೇಲೆ ಬಿದ್ದ ಕಾರಣ ಗಾಂಧೀಜಿ ಪಾರಾಗಿದ್ದರು.

ಪ್ರಕರಣದ ಆರೋಪಿಗಳ್ಯಾರು ಎನ್ನುವ ಬಗ್ಗೆ ಸ್ಪಷ್ಟ ಉಲ್ಲೇಖಗಳು ಸಿಗುವುದಿಲ್ಲ. ಅಲ್ಲೆಲ್ಲೂ ಗೋಡ್ಸೆ ಹೆಸರು ಬರುವುದಿಲ್ಲ. ಆದರೆ ಗಾಂಧೀಜಿಯವರ ಕೊನೆಯ ದಿನಗಳ ಬಗ್ಗೆ ಎರಡು ಸಂಪುಟಗಳಲ್ಲಿ ಬರೆದಿರುವ ಪ್ಯಾರೇಲಾಲ್ ಅವರು ಗಾಂಧೀಜಿ ಹತ್ಯೆಯ ಮೊದಲ ಪ್ರಯತ್ನದ ಬಗ್ಗೆ ಬರೆಯುತ್ತಾ 'ಈ ಪ್ರಯತ್ನದಲ್ಲಿ ಭಾಗಿಯಾಗಿದ್ದವರೇ 1948ರಲ್ಲಿ ಗಲಭೆಗ್ರಸ್ತ ದೆಹಲಿಯಲ್ಲಿ ಶಾಂತಿಪಾಲನೆಗಾಗಿ ಹೋರಾಡುತ್ತಿದ್ದ ಗಾಂಧೀಜಿಯವರ ಕೊಲೆಗೈದರು' ಎಂದು ಹೇಳಿದ್ದಾರೆ.

'ಗಾಂಧೀಜಿ ಮುಸ್ಲಿಮ್ ಪಕ್ಷಪಾತಿಯಾಗಿದ್ದರು, ಭಾರತದ ವಿಭಜನೆಗೆ ಕಾರಣರಾಗಿದ್ದರು. ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿ ನೀಡುವಂತೆ ಭಾರತ ಸರ್ಕಾರದ ಮೇಲೆ ಅವರು ಒತ್ತಡ ಹೇರಿದ್ದರು. ಇದನ್ನು ಕಂಡು ಕ್ರುದ್ಧರಾದ ಹಿಂದೂ ಮಹಾಸಭಾಕ್ಕೆ ಸೇರಿದ್ದ ಗೋಡ್ಸೆ ಮತ್ತು ಆಪ್ಟೆ ಗಾಂಧೀಜಿಯವರ ಹತ್ಯೆಗೆ ಮುಂದಾದರು' ಎನ್ನುವ ಸಾಮಾನ್ಯ ಅಭಿಪ್ರಾಯ ಜನಜನಿತವಾಗಿದೆ. ಅಪರಾಧಿಗಳು ನ್ಯಾಯಾಲಯದಲ್ಲಿ ನೀಡಿರುವ ಹೇಳಿಕೆಗಳು ಮತ್ತು ನ್ಯಾಯಾಲಯದ ತೀರ್ಪು ಕೂಡಾ ಇದನ್ನೇ ಹೇಳುತ್ತವೆ.

ಗಾಂಧೀಜಿ ಹತ್ಯೆಗೆ ಮೊದಲ ಪ್ರಯತ್ನ ನಡೆದಿದ್ದಾಗ ಭಾರತದ ವಿಭಜನೆ ಆಗಿರಲಿಲ್ಲ, ಮುಸ್ಲಿಮ್ ಪಕ್ಷಪಾತಿ ಎಂಬ ಆರೋಪ ಕೂಡಾ ಅವರ ಮೇಲೆ ಇರಲಿಲ್ಲ. ಆಗಿನ್ನೂ ಬ್ರಿಟಿಷರ ವಿರುದ್ಧದ ಹೋರಾಟಕ್ಕಿಂತಲೂ ಹೆಚ್ಚಾಗಿ ಹಿಂದೂ ಸಮಾಜದ ಅನಿಷ್ಟವಾದ ಅಸ್ಪೃಶ್ಯತೆ ಮತ್ತು ಕಂದಾಚಾರಗಳ ವಿರುದ್ಧ ಜನಜಾಗೃತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹರಿಜನರಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ನೀಡಬೇಕೆಂದು ಚಳವಳಿ ಪ್ರಾರಂಭಿಸಿದ್ದರು.



ಗಾಂಧೀಜಿ ಹತ್ಯೆಗೆ ನಡೆದ ಐದು ಪ್ರಯತ್ನಗಳನ್ನು ದೃಢೀಕರಿಸುವ ದಾಖಲೆಗಳು ಲಭ್ಯ ಇವೆ. ಈ ಐದೂ ಪ್ರಯತ್ನಗಳಲ್ಲಿ ನಾಥುರಾಮ್ ಗೋಡ್ಸೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಭಾಗವಹಿಸಿದ್ದ ಉಲ್ಲೇಖಗಳಿವೆ.


ಗಾಂಧೀಜಿಯವರ ಈ ವಿಚಾರಗಳೇ ಅವರ ವಿರೋಧಿಗಳ ಸಿಟ್ಟಿಗೆ ಕಾರಣವಾಗಿತ್ತೇ?

ಗಾಂಧಿ ಹತ್ಯೆಯ ಎರಡನೇ ಪ್ರಯತ್ನ ಮಹಾರಾಷ್ಟ್ರದ ಪಂಚಗಣಿಯಲ್ಲಿ 1944ರ ಜುಲೈ ತಿಂಗಳಲ್ಲಿ ನಡೆದಿತ್ತು.

ಮಲೇರಿಯಾ ಪೀಡಿತರಾಗಿದ್ದ ಗಾಂಧೀಜಿ ವಿಶ್ರಾಂತಿಗಾಗಿ ಅಲ್ಲಿಗೆ ಹೋಗಿದ್ದರು. ಅಲ್ಲಿಗೆ ನಾಥುರಾಮ್ ಗೋಡ್ಸೆ ತನ್ನ ಬೆಂಬಲಿಗರೊಂದಿಗೆ ಹೋಗಿ ಪ್ರತಿಭಟನೆ ನಡೆಸಿದ್ದ. ಆತನನ್ನು ಮಾತುಕತೆಗೆ ಗಾಂಧೀಜಿ ಕರೆದಾಗ ಹೋಗದ ಗೋಡ್ಸೆ ಪ್ರಾರ್ಥನೆಯ ಸಮಯದಲ್ಲಿ ಕೈಯಲ್ಲಿ ಕಠಾರಿ ಝಳಪಿಸುತ್ತಾ ಗಾಂಧೀಜಿ ಕಡೆ ನುಗ್ಗಿದ್ದ.

ಆಗ ಗಾಂಧಿ ಅನುಯಾಯಿಗಳು ಆತನನ್ನು ತಡೆದು ಹೊರಗೆ ಒಯ್ದಿದ್ದರು. 'ಕೊಲೆ ಮಾಡಲು ಬಂದವನು ನಾಥುರಾಮ್ ಗೋಡ್ಸೆ' ಎಂದು ಆತನ ಯತ್ನವನ್ನು ವಿಫಲಗೊಳಿಸಿದ್ದ ಅಲ್ಲಿನ ವಿಶ್ರಾಂತಿಗೃಹದ ಮಾಲೀಕ ಮಣಿಶಂಕರ್ ಪುರೋಹಿತ್ ಮತ್ತು ಸತಾರದ ಡಿ.ಬಿಲಾರೆ ಗುರೂಜಿ ಅವರು ಕಪೂರ್ ಆಯೋಗದ ಮುಂದೆ ಸಾಕ್ಷ್ಯ ಹೇಳಿದ್ದಾರೆ.

ಮೂರನೇ ಪ್ರಯತ್ನ 1944ರ ಸೆಪ್ಟೆಂಬರ್‌ನಲ್ಲಿ ಗಾಂಧೀಜಿ ಮತ್ತು ಜಿನ್ನಾ ನಡುವಿನ ಮಾತುಕತೆಯ ಮೊದಲು, ಸೇವಾಗ್ರಾಮದಲ್ಲಿಯೇ ನಡೆದಿತ್ತು. ಆ ಮಾತುಕತೆಗೆ ಹೋಗದಂತೆ ತಡೆಯಲು ನಾಥುರಾಮ್ ಗೋಡ್ಸೆ ತನ್ನ ಬೆಂಬಲಿಗರೊಂದಿಗೆ ಗಾಂಧೀಜಿ ಉಳಿದುಕೊಂಡಿದ್ದ ಸೇವಾಗ್ರಾಮಕ್ಕೆ ಹೋಗಿದ್ದ. ಗಾಂಧೀಜಿ ಕಡೆ ನುಗ್ಗಿ



ಬರುತ್ತಿದ್ದ ಗೋಡ್ಸೆಯನ್ನು ಆಶ್ರಮವಾಸಿಗಳು ತಡೆದು ನಿಲ್ಲಿಸಿದ್ದರು.

ಪೊಲೀಸರು ಬಂದು ತಪಾಸಣೆ ಮಾಡಿದಾಗ ಆತನ ಅಂಗಿಯ ಕಿಸೆಯಲ್ಲಿ ಕಠಾರಿ ಇದ್ದದ್ದು ಗೊತ್ತಾಗಿತ್ತು. ರೈಲು ಅಪಘಾತದ ಮೂಲಕ ಗಾಂಧೀಜಿಯವರನ್ನು ಕೊಲ್ಲುವ ನಾಲ್ಕನೇ ಪ್ರಯತ್ನ ಪುಣೆಯಲ್ಲಿಯೇ 1946ರ ಜೂನ್ 29ರಂದು ನಡೆದಿತ್ತು.ಗಾಂಧೀಜಿಯವರು ಪ್ರಯಾಣಿಸುತ್ತಿದ್ದ 'ಗಾಂಧೀ ವಿಶೇಷ~ ಎನ್ನುವ ಹೆಸರಿನ ರೈಲು ಪುಣೆಗೆ ಹೋಗುತ್ತಿರುವಾಗ ಹಳಿಗಳ ಮೇಲೆ ಕಲ್ಲುಬಂಡೆಗಳನ್ನು ಇಟ್ಟು ಅಪಘಾತ ನಡೆಸುವ ಪ್ರಯತ್ನ ನಡೆಸಲಾಗಿತ್ತು.

ಆದರೆ ರೈಲಿನ ಚಾಲಕ ವಹಿಸಿದ್ದ ಎಚ್ಚರಿಕೆಯಿಂದಾಗಿ ಆ ಅಪಘಾತ ನಡೆಯಲಿಲ್ಲ. ಈ ಘಟನೆ ನಡೆದ ಮರುದಿನವೇ ಗಾಂಧೀಜಿ ಪುಣೆಯಲ್ಲಿ ನಡೆದ ಸಭೆಯಲ್ಲಿ 'ನಾನು 125 ವರ್ಷ ಬದುಕುತ್ತೇನೆ...~ಎಂದು ಹೇಳಿದ್ದು. ಅದನ್ನು ಕೇಳಿ ಆ ಸಭೆಯಲ್ಲಿದ್ದ ನಾಥುರಾಮ್ ಗೋಡ್ಸೆ 'ಅಷ್ಟುದಿನ ನಿಮ್ಮನ್ನು ಬದುಕಲು ಯಾರು ಬಿಡುತ್ತಾರೆ~ ಎಂದು ಪ್ರತಿಕ್ರಿಯಿಸಿದ್ದನ್ನು ಆತನ ಜತೆಯಲ್ಲಿದ್ದವರು ನಂತರದ ದಿನಗಳಲ್ಲಿ ಬಹಿರಂಗಪಡಿಸಿದ್ದಾರೆ.

ಗಾಂಧೀಜಿಯವರ ಹತ್ಯೆಯ ಕೊನೆಯ ಪ್ರಯತ್ನ ವಿಫಲಗೊಂಡದ್ದು 1948ರ ಜನವರಿ 20ರಂದು. ತಾವು ನಂಬಿದ್ದ 'ಗುರುಹಿರಿಯರ~ ಆಶೀರ್ವಾದದೊಂದಿಗೆ ಸರ್ವಸನ್ನದ್ಧರಾಗಿ ದೆಹಲಿಗೆ ಬಂದಿದ್ದ ನಾಥೂರಾಮ್ ಗೋಡ್ಸೆ ಮತ್ತು ಸಂಗಾತಿಗಳು, ಸಂಜೆ ಹೊತ್ತಿಗೆ ಬಿರ್ಲಾ ಭವನದೊಳಗೆ ಸೇರಿಕೊಂಡಿದ್ದರು. ಮೊದಲು ಮದನ್ಲಾಲ್ ಪಹವಾ ಗಾಂಧೀಜಿ ಪ್ರಾರ್ಥನೆ ಮಾಡುವ ಸ್ಥಳದ ಹಿಂದಿನ ಗೋಡೆಯಲ್ಲಿ ಬಾಂಬು ಇಟ್ಟು ಸ್ಫೋಟಿಸಬೇಕು.

ಅದಾದ ಕೂಡಲೇ ಗೋಡ್ಸೆ ಮತ್ತು ವಿಷ್ಣು ಕರಕರೆ ಗ್ರೆನೇಡ್ ಎಸೆಯಬೇಕು. ಅಂತಿಮವಾಗಿ ದಿಗಂಬರ ಬಡ್ಗೆ ಗಾಂಧೀಜಿಯವರ ಕಡೆ ರಿವಾಲ್ವರ್‌ನಿಂದ ಗುಂಡುಹಾರಿಸಬೇಕು-ಇದು ಮೂಲ ಯೋಜನೆ. ಆದರೆ ಬಾಂಬು ಸ್ಫೋಟವಾದ ಕೂಡಲೇ ಪೊಲೀಸರು ಮದನ್ಲಾಲ್‌ನನ್ನು ವಶಕ್ಕೆ ತೆಗೆದುಕೊಂಡಿದ್ದರು. ಅದನ್ನು ನೋಡಿದ ಕೂಡಲೇ ಉಳಿದವರು ಅಲ್ಲಿಂದ ಪಲಾಯನಗೈದರು.

ಮದನ್ಲಾಲನನ್ನು ಬಂಧಿಸಿದ್ದ ಪೊಲೀಸರು 24 ಗಂಟೆಗಳ ಅವಧಿಯಲ್ಲಿ ಗಾಂಧಿ ಹತ್ಯೆಯ ಸಂಚಿನ ವಿವರಗಳನ್ನೆಲ್ಲ ಸಂಗ್ರಹಿಸಿದ್ದರು. ಪಂಜಾಬಿ ನಿರಾಶ್ರಿತ ಮದನ್ಲಾಲ್ಗೆ ಆಶ್ರಯ ನೀಡಿ ಸಾಕಿದ್ದವರು ಮಹಾರಾಷ್ಟ್ರದ ಪ್ರೊ.ಜಗದೀಶ್ಚಂದ್ರ ಜೈನ್ ಎಂಬ ಪ್ರಾಧ್ಯಾಪಕರು.

ತಾನು ಗಾಂಧಿ ಹತ್ಯೆಯ ಸಂಚಿನಲ್ಲಿ ಸೇರಿಕೊಂಡದ್ದನ್ನು ಆತ ಪ್ರೊ.ಜೈನ್ ಅವರಿಗೂ ತಿಳಿಸಿದ್ದ. ಮದನ್ಲಾಲ್ ಬಂಧನದ ಸುದ್ದಿ ಪತ್ರಿಕೆಯಲ್ಲಿ ಓದಿದ ಕೂಡಲೇ ಜಾಗೃತರಾದ ಪ್ರೊ.ಜೈನ್ ಆಗ ಮಹಾರಾಷ್ಟ್ರದ ಗೃಹಸಚಿವರಾಗಿದ್ದ ಮೊರಾರ್ಜಿ ದೇಸಾಯಿ ಅವರನ್ನು ಭೇಟಿಯಾಗಿ ಸಂಚಿನ ವಿವರ ತಿಳಿಸಿದ್ದರು.

ಆ ಮಾತುಕತೆಯಲ್ಲಿ ವಿ.ಡಿ.ಸಾವರ್ಕರ್ ಮತ್ತು 'ಕರ್ಕರೆ ಸೇಠ್~ ಜತೆ ಮದನ್ಲಾಲ್ ಹೊಂದಿದ್ದ ಸಂಪರ್ಕವನ್ನು ಕೂಡಾ ಅವರು ಒತ್ತಿ ಹೇಳಿದ್ದರು. 'ದಕ್ಷತೆಗೆ ಹೆಸರಾಗಿದ್ದ ಮತ್ತು ಗಾಂಧಿವಾದಿಯಾಗಿದ್ದ ಮೊರಾರ್ಜಿ ದೇಸಾಯಿ ವರ್ತನೆ ಆಶ್ಚರ್ಯಕರವಾಗಿತ್ತು. ಪ್ರೊ.ಜೈನ್ ಹೇಳಿದ್ದನ್ನು ಅವರು ದಾಖಲಿಸಿರಲಿಲ್ಲ, ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆಸಿ ಚರ್ಚಿಸಿರಲಿಲ್ಲ. ಪ್ರೊ.ಜೈನ್ ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೊಳಪಡಿಸಲು ಪೊಲೀಸರಿಗೆ ತಿಳಿಸಬಹುದಿತ್ತು.

ಅದನ್ನೂ ಮಾಡಿರಲಿಲ್ಲ. ಅಹಮದಾಬಾದ್ಗೆ ಹೊರಟಿದ್ದ ಅವರು ರೈಲ್ವೆ ನಿಲ್ದಾಣಕ್ಕೆ ಡಿಸಿಪಿ ನಗರ್ವಾಲಾ ಅವರನ್ನು ಕರೆಸಿ ವಿಷಯವನ್ನಷ್ಟೇ ತಿಳಿಸಿದ್ದರು~ ಎಂದು ಗಾಂಧೀಜಿ ಮೊಮ್ಮಗ ತುಷಾರ್ ಗಾಂಧಿ 'ಲೆಟ್ ಅಸ್ ಕಿಲ್ ಗಾಂಧಿ~ ಎಂಬ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ.

ಮೊರಾರ್ಜಿ ಅವರಿಂದ ವಿಷಯ ತಿಳಿದುಕೊಂಡ ಡಿಸಿಪಿ ನಗರ್ವಾಲ್ ತನ್ನ ಬಳಿ ಎಲ್ಲ ಮಾಹಿತಿ ಇದೆ ಎಂದು ಹೇಳುತ್ತಲೇ ಇದ್ದರೂ ಅದನ್ನು ಕೊನೆಗೂ ಬಹಿರಂಗಪಡಿಸಿದ್ದು ಗಾಂಧಿ ಹತ್ಯೆಯಾದ ಹನ್ನೆರಡು ಗಂಟೆಗಳ ನಂತರ. ಜನವರಿ 20ರಿಂದ 30ರ ವರೆಗಿನ ಹತ್ತು ದಿನಗಳ ಅವಧಿಯಲ್ಲಿ ನಾಥುರಾಮ್ ಗೋಡ್ಸೆ ಮತ್ತು ಸಂಗಾತಿಗಳು ದೆಹಲಿ-ಮುಂಬೈ ನಡುವೆ ನಿರಾತಂಕವಾಗಿ ಓಡಾಡುತ್ತಾ ಗಾಂಧಿ ಹತ್ಯೆಯ ಕೊನೆಯ ಪ್ರಯತ್ನಕ್ಕೆ ಸಿದ್ಧತೆ ನಡೆಸುತ್ತಿದ್ದರು.


ಆಗ ಕೇಂದ್ರದಲ್ಲಿ ಮಾತ್ರವಲ್ಲ, ಎಲ್ಲ ರಾಜ್ಯಗಳ ಆಡಳಿತ ಗಾಂಧೀಜಿ ಅನುಯಾಯಿಗಳ ಕೈಯಲ್ಲಿಯೇ ಇತ್ತು. ಕೇಂದ್ರದಲ್ಲಿ ಗೃಹಸಚಿವರಾಗಿದ್ದವರು 'ಉಕ್ಕಿನ ಮನುಷ್ಯ~ ಸರ್ದಾರ್ ವಲ್ಲಭಭಾಯಿ ಪಟೇಲ್. ಸಂಚು ರೂಪುಗೊಂಡ ಮಹಾರಾಷ್ಟ್ರದಲ್ಲಿ ಗೃಹಸಚಿವರಾಗಿದ್ದವರು ಮೊರಾರ್ಜಿ ದೇಸಾಯಿ. ಪ್ರಧಾನಿಯಾಗಿದ್ದವರು ಗಾಂಧೀಜಿ ತನ್ನ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿಸುತ್ತಿದ್ದ ಜವಾಹರಲಾಲ್ ನೆಹರೂ.

ದೆಹಲಿ ಪೊಲೀಸರು ಮದನ್ಲಾಲ್ ನೀಡಿದ ಮಾಹಿತಿ ಆಧರಿಸಿ ಸಂಚುಕೋರರು ತಂಗಿದ್ದ ಹೊಟೇಲ್ ಕೋಣೆ ಜಾಲಾಡಿಸಿದ್ದರು.

ಅಲ್ಲಿ ಹಿಂದೂ ಮಹಾಸಭಾದ ಲೆಟರ್‌ಹೆಡ್ ಸಿಕ್ಕಿದ್ದರೂ ಆ ಸಂಘಟನೆಯ ಪದಾಧಿಕಾರಿಗಳನ್ನು ಪೊಲೀಸರು ವಿಚಾರಿಸಿರಲಿಲ್ಲ. ಕಪೂರ್ ಆಯೋಗದ ಮುಂದೆ ಮಹಾಸಭಾದ ಪದಾಧಿಕಾರಿ ಅಶೋಕ್ ಲಾಹಿರಿಯವರೇ ಇದನ್ನು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಮದನ್ಲಾಲ್ ಪ್ರಮುಖವಾಗಿ 'ಅಗ್ರಾಣಿ~ ಮತ್ತು 'ಹಿಂದೂ ರಾಷ್ಟ್ರ~ ಎನ್ನುವ ಎರಡು ಪತ್ರಿಕೆಗಳ ಸಂಪಾದಕರು ಮತ್ತು ಪ್ರಕಾಶಕರ ಬಗ್ಗೆ ತಿಳಿಸಿದ್ದ.

ಅವರು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನವನ್ನೂ ಪೊಲೀಸರು ಹತ್ತು ದಿನಗಳ ಅವಧಿಯಲ್ಲಿ ಮಾಡಿರಲಿಲ್ಲ. ಕನಿಷ್ಠ ಆ ಒಂದು ಸಣ್ಣ ಪ್ರಯತ್ನ ಮಾಡಿದ್ದರೆ ಗಾಂಧಿ ಹತ್ಯೆಯ ಸಂಚನ್ನು ಭಗ್ನಗೊಳಿಸಬಹುದಿತ್ತು. ಯಾಕೆಂದರೆ ಆ ಸಂಪಾದಕರು ಮತ್ತು ಪ್ರಕಾಶಕರ ಹೆಸರು– ನಾಥುರಾಮ್ ಗೋಡ್ಸೆ ಮತ್ತು ನಾರಾಯಣ ಅಪ್ಟೆ. ಗಾಂಧೀಜಿಯವರನ್ನು ಕೇವಲ ನಾಥುರಾಮ್ ಗೋಡ್ಸೆ ಕೊಂದದ್ದು ಎಂದು ಹೇಗೆ ಹೇಳುವುದು? ■

(ಹತ್ತುವರ್ಷಗಳ ಹಿಂದೆ ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದ ಅಂಕಣ)




ನಮ್ಮ ಬಾಪು ನಮ್ಮ ಹೆಮ್ಮೆ

–ರವಿಚಂದ್ರ ಜಂಗಣ್ಣವರ್

ನಮ್ಮ ರಾಷ್ಟ್ರಪಿತನ ಕೆಲವು ವಿಶೇಷಗಳು.

- ಜಗತ್ತಿನ 100 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ಪೋಸ್ಟಲ್ ಸ್ಟಾಂಪ್ ಗಳನ್ನು ಬಿಡುಗಡೆ ಮಾಡಿವೆ. ಮೊಟ್ಟ ಮೊದಲು ಬಿಡುಗಡೆಗೊಳಿಸಿದ ದೇಶ ಪೋಲಂಡ್
- ಭಾರತ ಅಂಚೆ ಇಲಾಖೆಯು ಇಲ್ಲಿಯವರೆಗೂ ಗಾಂಧೀಜಿಯ ಭಾವಚಿತ್ರ ಇರುವ ಸುಮಾರು 40 ಕ್ಕೂ ಹೆಚ್ಚು ಸ್ಟಾಂಪ್ ಮತ್ತು 200 ಕ್ಕೂ ಹೆಚ್ಚು ಪೋಸ್ಟಲ್ ಎನ್ವಲಪ್ಗಳನ್ನು ಬಿಡುಗಡೆಗೊಳಿಸಿದೆ.
- ಸುಮಾರು 40 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ನಾಣ್ಯಗಳನ್ನು ಬಿಡುಗಡೆಗೊಳಿಸಿವೆ.
- ಸುಮಾರು 80 ಕ್ಕೂ ಹೆಚ್ಚು ದೇಶಗಳಲ್ಲಿ ಗಾಂಧೀಜಿಯವರ ವಿವಿಧ ರೀತಿಯ ಪ್ರತಿಮೆಗಳಿವೆ.
- ಗಾಂಧೀಜಿಯವರ ಹೆಸರಿನ ರಸ್ತೆಗಳು ಸುಮಾರು 40 ಕ್ಕೂ ಹೆಚ್ಚು ದೇಶಗಳಲ್ಲಿವೆ.
- ಗಾಂಧೀಜಿ ಮರಣ ಹೊಂದಿದ ದಿನ ಶ್ರೀಲಂಕಾ ಸರಕಾರವು ಶೋಕಾಚರಣೆ ಮಾಡಿ ತನ್ನ ರೇಡಿಯೋ ಪ್ರಸಾರವನ್ನು 24 ಗಂಟೆಗಳ ಕಾಲ ಬಂದ್ ಮಾಡಿತ್ತು.
- ಗಾಂಧೀಜಿಯವರು ಬದುಕಿದ್ದಾಗಲೇ ಅವರ ಜೀವನ ಚರಿತ್ರೆ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ರೋಮನ್ ರೋಲ್ಯಾಂಡ್ ಅವರಿಂದ ಬರೆಯಲ್ಪಟ್ಟಿತ್ತು.
- ಗಾಂಧೀಜಿಯುವರು ತಮ್ಮ ಎರಡೂ ಕೈಗಳಿಂದ ಬರೆಯುತ್ತಿದ್ದರು. ಹಿಂದ್ ಸ್ವರಾಜ್ ಪುಸ್ತಕದ ಕೆಲವು ಪುಟಗಳನ್ನು ಎಡಗೈಯಿಂದ ಬರೆದಿದ್ದರು.
- ಗಾಂಧೀಜಿಯುವರು ತಮ್ಮ ಜೀವಮಾನದಲ್ಲೇ ವಿಮಾನದಲ್ಲಿ ಒಂದು ಸಾರಿಯೂ ಪ್ರಯಾಣಿಸಲಿಲ್ಲ.



- ತಮ್ಮ ಸಮಕಾಲೀನ ಜಗತ್ತುನ ನಾಯಕರಲ್ಲೇ ಅತ್ಯಂತ ಹೆಚ್ಚು ಫೋಟೋಗ್ರಾಫ್ಗಳನ್ನು ಹೊಂದಿದ ವ್ಯಕ್ತಿ ಗಾಂಧೀಜಿ.
- ತಮ್ಮ ಜೀವಮಾನದಲ್ಲೇ ಒಮ್ಮೆಯೂ ಗಾಂಧೀಜಿ ಅಮೇರಿಕಾಕ್ಕೆ ಭೇಟಿ ನೀಡಲಿಲ್ಲ. ಆದರೆ ಅಮೇರಿಕಾ ಒಂದರಲ್ಲೇ ಗಾಂಧೀಜಿಯವರ 30 ಕ್ಕೂ ಹೆಚ್ಚು ಪ್ರತಿಮೆಗಳಿವೆ.
- 1999 ರಲ್ಲಿ ಟೈಮ್ಸ್ ಮ್ಯಾಗ್ಜೀನ್ ನಡೆಸಿದ 'ಶತಮಾನದ ವ್ಯಕ್ತಿ' ಸ್ಪರ್ಧೆಯಲ್ಲಿ ಗಾಂಧೀಜಿಗೆ ಎರಡನೇ ಸ್ಥಾನ. ಮೊದಲ ಸ್ಥಾನ ಗಾಂಧೀಜಿಯವರನ್ನು ಬಹುವಾಗಿ ಮೆಚ್ಚಿದ ಅಲ್ಬರ್ಟ್ ಐನಸ್ಟೀನ್.
- ಗಾಂಧೀಜಿಯವರಿಗೆ ಮುಂದಿನ ಎರಡು ಹಲ್ಲುಗಳು ಹರೆಯದಲ್ಲೇ ಬಿದ್ದು ಹೋಗಿದ್ದವು. ತಿನ್ನುವುದಕ್ಕಾಗಿ ಎರಡು ಹಲ್ಲುಗಳ ಸೆಟ್ ಒಂದನ್ನು ಮಾಡಿಸಿಕೊಂಡಿದ್ದರು. (ದ.ಆಫ್ರಿಕಾದಲ್ಲಿ ಬಿಳಿಯರಿಂದ ದಾಳಿಗೊಳಗಾದಾಗ ಎರಡು ಹಲ್ಲುಗಳು ಉದುರಿದ್ದವು).
- ಅಮೇರಿಕಾದ ಟೈಮ್ ಮ್ಯಾಗ್ಜಿನ್ 1930 ರಲ್ಲಿ 'ವರ್ಷದ ವ್ಯಕ್ತಿ' ಎಂದು ಗಾಂಧೀಜಿಯರನ್ನು ಘೋಷಿಸಿ ಮುಖಪುಟದಲ್ಲಿ ಅವರ ಭಾವಚಿತ್ರ ಪ್ರಕಟಿಸಿತ್ತು. ಟೈಮ್ಸ್ ಮ್ಯಾಗಝಿನ್ ಮುಖಪುಟದಲ್ಲಿ ಮೊದಲು ಕಾಣಿಸಿಕೊಂಡವರು ನಮ್ಮ ಗಾಂಧೀಜಿ .
- ಯಾವುದೇ ಅಧಿಕಾರದಲ್ಲಿಲ್ಲದ ಗಾಂಧೀಜಿ ತೀರಿಕೊಂಡಾಗ ವಿಶ್ವಸಂಸ್ಥೆಯು ತನ್ನ ಎಲ್ಲ 55 ಸದಸ್ಯ ರಾಷ್ಟ್ರಗಳ ಧ್ವಜವನ್ನು ಅರ್ಧಕ್ಕೆ ಇಳಿಸಿ ಶೋಕಾಚರಣೆ ಮಾಡಿತ್ತು. ಇದು ಇತಿಹಾಸದಲ್ಲೇ ಮೊದಲ ಬಾರಿ ಮತ್ತು ಕೊನೆಯ ಬಾರಿ ನಡೆದ ಘಟನೆ. ಮತ್ತೊಬ್ಬರಿಗೆ ಈ ರೀತಿ ಗೌರವ ಸಿಕ್ಕಿಲ್ಲ.
- ಗಾಂಧೀಜಿಯವರು ಯಾವ ದೇಶದ ವಿರುದ್ಧ ಜೀವಮಾನವಿಡಿ ಹೋರಾಡಿದರೋ ಅದೇ ದೇಶದ (ಇಂಗ್ಲೆಂಡಿನ ಲಂಡನ್ ಸ್ಕೈರ್) ಪಾರ್ಲಿಮೆಂಟ್ ಮುಂದೆ ಗಾಂಧೀಜಿಯ ಪ್ರತಿಮೆ ಸ್ಥಾಪಿಸಲ್ಪಟ್ಟಿದೆ.
- ಜಗತ್ತಿನಲ್ಲೇ ವಿಶ್ವಸಂಸ್ಥೆಯಿಂದ ಆಚರಿಸಲ್ಪಡುವ ಜನ್ಮದಿನ ಕೇವಲ 'ಗಾಂಧಿ ಜನ್ಮದಿನ' ಮಾತ್ರ. ವಿಶ್ವಸಂಸ್ಥೆಯು ಗಾಂಧೀ ಜನ್ಮದಿನವನ್ನು 'ವಿಶ್ವ ಅಹಿಂಸಾ ದಿನ' ಎಂದು ಘೋಷಿಸಿದೆ.
- ಗಾಂಧೀಜಿಯವರು ಕುಷ್ಠರೋಗಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ತಮ್ಮ ಆಶ್ರಮದಲ್ಲಿ ಪರಚುರೆ ಶಾಸ್ತ್ರಿ ಎಂಬ ವ್ಯಕ್ತಿಯ ಕುಷ್ಠರೋಗವನ್ನು ಶುಶ್ರೂತೆ ಮಾಡಿದ್ದರು. ಈ ನೆನಪಿಗಾಗಿ ಭಾರತ ಸರ್ಕಾರ 'ಕುಷ್ಠರೋಗ ದಿನ' ಎಂದು ಆಚರಿಸುತ್ತದೆ.
- ಗಾಂಧೀಜಿಯಿಂದ ಪ್ರೇರಣೆಗೊಂಡು ನಾಲ್ಕು ಖಂಡಗಳ ಸುಮಾರು 20 ಕ್ಕೂ ಹೆಚ್ಚು ದೇಶಗಳಲ್ಲಿ ಮಾನವ ಹಕ್ಕುಗಳ ಹೋರಾಟಗಳು ನಡೆದಿವೆ
- ಸುಮಾರು 6 ಬಾರಿ ನೊಬೆಲ್ ನಾಮಿನೇಟ್ ಗೊಂಡಿರುವ ಗಾಂಧೀಜಿಗೆ ನೊಬೆಲ್ ಸಿಗಲಿಲ್ಲ. ಕೊನೆಗೆ ನೊಬೆಲ್ ಸಂಸ್ಥೆ ಈ ವಿಷಯವಾಗಿ ಕ್ಷಮೆ ಕೇಳಿ 'ಅವರು ನೊಬೆಲ್ ಗಿಂತ ದೊಡ್ಡವರು' ಎಂದು ಹೇಳಿತು.
- ಗಾಂಧೀಜಿಯವರನ್ನು ಒಮ್ಮೆಯೂ ಭೇಟಿಯಾಗದ ನೆಲ್ಸನ್ ಮಂಡೇಲಾ (ದ.ಆಫ್ರಿಕಾದ ಗಾಂಧಿ) ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ (ಅಮೇರಿಕಾದ ಗಾಂಧಿ) ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿದೆ.
- ದ.ಆಫ್ರಿಕಾದ ಜೈಲಿನಲ್ಲಿ ನೇಕಾರ ಕೆಲಸ ಆರಿಸಿಕೊಂಡ ಗಾಂಧೀಜಿಯವರು ಎರಡು ತುದಿ ಚೂಪಾಗಿರುವ ಟೋಪಿ ಒಂದನ್ನು ಹೊಲಿದರು. ಅದೇ ಮುಂದೆ ಗಾಂಧಿ ಟೋಪಿ ಎಂದು ಪ್ರಸಿದ್ಧವಾಗಿ ಈಗಲೂ ಚಾಲ್ತಿಯಲ್ಲಿದೆ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಮತ್ತು ಅವರ ಸಾವಿರಾರು ಸಹಚರರು ತಮ್ಮ ಪ್ರಸಿದ್ಧ ವಾಷಿಂಗ್ಟನ್ ಯಾತ್ರೆಯಲ್ಲಿ ಗಾಂಧಿ ಟೋಪಿ ಧರಿಸಿ ಹೋರಾಟಕ್ಕೆ ಇಳಿದಿದ್ದರು. ಆದರೆ ಗಾಂಧೀಜಿಯವರಿಗೆ ನಾವು ನಿಮ್ಮ ವಿರುದ್ಧ ಸಿದ್ಧಾಂತಿಗಳು ಎಂದು ತಿಳಿಸಲು ಕೆಲವರು ಗಾಂಧಿ ಟೋಪಿಗೆ ವಿರುಧ್ಧವಾದ ಬಣ್ಣದ (ಕಪ್ಪು ಬಣ್ಣದ) ಟೋಪಿ ಧರಿಸಿ ಕೆಲವು ದಾರಿ ತಪ್ಪಿದವರು ಹಾರಾಟ, ಚೀರಾಟ ಮಾಡಿದರು. ಈಗಲೂ ಮಾಡುತ್ತಿದ್ದಾರೆ.

■



ಐತಿಹಾಸಿಕ ದಿನದ ನೆನಪು

06–04–1930

ಭಾರತ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನೇತಾರ,ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮಾರ್ಚ್ 12. 1930 ರಂದು ಬೆಳಗ್ಗೆ 06:30ಕ್ಕೆ ಗುಜರಾತಿನ ತಮ್ಮ ಸಬರಮತಿ ಆಶ್ರಮದಿಂದ 78 ಜನ ಸತ್ಯಾಗ್ರಹಿಗಳೊಂದಿಗೆ 241ಮೈಲಿ (390 ಏಟ) ದೂರವಿರುವ ಕಡಲ ಕಿನಾರೆಯ ದಂಡಿಯ ವರೆಗೆ ಐತಿಹಾಸಿಕ 'ಉಪ್ಪಿನ ಸತ್ಯಾಗ್ರಹ' ವನ್ನು ಆರಂಭಿಸಿದರು.

ಒಟ್ಟು 24 ದಿನ ನಡೆದು ಏಪ್ರಿಲ್ 05ರ ಸಂಜೆ ದಾಂಡಿಯನ್ನು ತಲುಪಿ ಮರುದಿನ 06 ರಂದು ಪ್ರಾತ:ಕಾಲದಲ್ಲೆದ್ದು ಸರ್ವಧರ್ಮ ಪ್ರಾರ್ಥನೆ ಸಲ್ಲಿಸಿ, 8ಗಂಟೆಯ ಸುಮಾರಿಗೆ ಸಮುದ್ರ ತೀರಕ್ಕಿಳಿದು ಬಿಳಿಯರು ಹೇರಿದ್ದ ' ಸಾಲ್ಟ್ ಲಾ ' ಉಪ್ಪಿನ ಕಾಯಿದೆಯನ್ನು ಭಂಗ ಮಾಡಿ,

ಬಲಿಷ್ಠವಾಗಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸವಾಲೆಸೆದರು.

ಜಗತ್ ಪ್ರಸಿದ್ಧವಾದ ಸಾಲ್ಟ್ ಸತ್ಯಾಗ್ರಹದ ಬಗ್ಗೆ ಅಮೆರಿಕೆಯ ಖ್ಯಾತ ಪತ್ರಕರ್ತ ವೆಬ್ ಮಿಲ್ಲರ್ ಹೊರ ಜಗತ್ತಿಗೆ ಸಮಗ್ರವಾಗಿ ಪರಿಚಯಿಸಿದರು. ಪಂಡಿತ್ ಮೋತಿಲಾಲ್ ನೆಹರೂ, ನೇತಾಜಿ ಬೋಸ್ ರು ಸೇರಿದಂತೆ ಸಾಲ್ಟ್ ಸತ್ಯಾಗ್ರಹದ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.

ಅಂತೆಯೇ..,

ಫ್ರೆಂಚ್ ನಾಟಕಕಾರ, ಬಾಪೂ ಜೀವನ ಚರಿತ್ರೆಯನ್ನು ಬರೆದ ನೊಬೆಲ್ ವಿಜೇತ ರೋಮಾ ರೋಲಾ ಅವರು ಅದ್ಭುತವಾಗಿ ಬರೆದರು.

ರೋಲಾರು ಬರೆದ ಮಹೋನ್ನತ ಸಾಲುಗಳಿವು..

' had mahatma gandhi gone by train or automobile to make salt. the effect would have been considerable,

but to walk 241 miles in 24 days & rivet the attention of all india, to trek across the country side saying.

watch i will give signal to the nation & then pick up a palmful of salt in publicised defiance of a mighty govt. that required imagination, dignity & a sense of show man ship of a great artist.

It appealed to illiterate peasants & it fascinated sophisticated critics like netaji subhash chandra bose who compared the salt march to Napoleon's march to paris after his return from elba .



ಕಬೀರನಾದ ಕುಬೇರ
ಕಾರ್ನಾಡ್ ಸದಾಶಿವ ರಾವ್

– ಅರವಿಂದ ಚೊಕ್ಕಾಡಿ

ಕುಬೇರ ಹಣದ ಒಡೆಯ ಎಂದು ನಂಬಿಕೆ. ಕಾರ್ನಾಡ್ ಸದಾಶಿವ ರಾವ್ ಅವರ ಹಿರಿಯರು ಮುಲ್ಕಿಯ ಸಾವಂತರಸರ ಶಾನುಭಾಗರಾಗಿದ್ದು, ಅವರ ತಂದೆ ರಾಮಚಂದ್ರ ರಾಯರು ಹೆಸರಾಂತ ವಕೀಲರಾಗಿ ಆಗರ್ಭ ಶ್ರೀಮಂತರಾಗಿದ್ದರು. ಸ್ವಾತಂತ್ರ್ಯ ಹೋರಾಟಕ್ಕಾಗಿ ಕರ್ನಾಟಕದ ಭಾಗಕ್ಕೆ ಕಾಂಗ್ರೆಸ್ ಚಳವಳಿಯನ್ನು ತಂದ ಕಾರ್ನಾಡ್ ಸದಾಶಿವ ರಾಯರು ಸ್ವಾತಂತ್ರ್ಯ ಹೋರಾ, ದಲಿತೋದ್ಧಾರ, ನೆರೆ ಪರಿಹಾರ, ವಿಧವಾ ಪುನರ್ವಿವಾಹ, ರಾಷ್ಟ್ರೀಯ ಶಾಲೆಗಳು ಮುಂತಾಗಿ ಜನಸೇವೆಯಲ್ಲೇ ತೊಡಗಿ ತಮ್ಮ ಶ್ರೀಮಂತಿಕೆ ಎಲ್ಲವನ್ನೂ ಕಳೆದುಕೊಂಡು ಕೊನೆಗೆ ಫೈಝ್ಪುರ್ ಕಾಂಗ್ರೆಸ್ ಅಧಿವೇಷನದಿಂದ ಹಿಂದಿರುಗುವಾಗ ಮುಂಬೈಯಲ್ಲಿ ಬೀದಿ ಬದಿಯಲ್ಲಿ ಕುಸಿದು ಬಿದ್ದರು. ಅವರನ್ನು ಹರ್ಕಿಶನ್ ಆಸ್ಪತ್ರೆಗೆ ಸೇರಿಸಲಾಯಿತು. ತನ್ನ ಅನಾರೋಗ್ಯವನ್ನು ಲೆಕ್ಕಿಸದೆ ಜ್ವರ ಪೀಡಿತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರೊಬ್ಬರಿಗೆ ಮದ್ದು ತೆಗೆದುಕೊಳ್ಳಲು ತಮ್ಮ ಬಳಿ ಕೊನೆಗೆ ಉಳಿದಿದ್ದ ಐದು ರೂಪಾಯಿಯನ್ನೂ ಕೊಟ್ಟಿದ್ದರು. ಒಬ್ಬ ನಿರ್ಗತಿಕ ಅನಾಥನಂತೆ ಆಸ್ಪತ್ರೆಗೆ ಸೇರಿದ್ದ ಸದಾಶುವ ರಾಯರ ಪಾರ್ಥಿವ ದೇಹ ಮರುದಿನ ಆಸ್ಪತ್ರೆಯಿಂದ ಹೊರ ಬರುವಾಗ ಕಾಲು ಹಾಕಲು ಜಾಗವಿಲ್ಲದಷ್ಟು ಜನ ಮುಂಬೈಯಲ್ಲಿ ಸೇರಿ ಅಂತಿಮ ಗೌರವವನ್ನು ಸಲ್ಲಿಸಿದ್ದರು. ಬಾಲಗಂಗಾಧರ ತಿಲಕರ ಮರಣದ ನಂತರ ಮುಂಬೈಯಲ್ಲಿ ಸಾವಿನ ಸಂದರ್ಭದಲ್ಲಿ ಆ ರೀತಿಯಲ್ಲಿ ಜನ ಸೇರಿದ್ದು ಕಾರ್ನಾಡ್ ಸದಾಶಿವ ರಾಯರಿಗೆ. ಒಬ್ಬ ನಿರ್ಗತಿಕನಿಗೆ ಈ ರೀತಿಯ ಗೌರವ ಸಲ್ಲುವುದಿಲ್ಲ. ಸಂತನಿಗೆ ಸಲ್ಲುವ ಗೌರವವದು. ಆದ್ದರಿಂದಲೇ ಕಾರ್ನಾಡ್ ಸದಾಶಿವ ರಾಯರು **'ಕಬೀರನಾದ ಕುಬೇರ'**.

1881 ರ ಯುಗಾದಿಯ ದಿನ ಜನಿಸಿದ್ದ ಸದಾಶಿವ ರಾಯರು 9 ಜನವರಿ 1937 ರಂದು ಮೃತರಾದರು. ಅವರ ಜೀವನವೂ ಸಂತನ ಶೈಲಿಯದೇ ಆಗಿತ್ತು. ಶಾಲೆಯ ಬಾಲಕ ಸದಾಶಿವ ರಾಯರು ಚಳಿಯಲ್ಲಿ ನಡುಗುತ್ತಿದ್ದ ಹುಡುಗನನ್ನು ಕಂಡು ತನ್ನ ಕೋಟನ್ನು ಬಿಚ್ಚಿ ಅವನಿಗೆ ಕೊಟ್ಟವರು. ಸದಾಶಿವ ರಾಯರ ಪತ್ನಿ ಶಾಂತಾ ಬಾಯಿ ಮಂಗಳೂರಿನಲ್ಲಿ ಮಹಿಳಾ ಸಭಾವನ್ನು ಪ್ರಾರಂಬಿಸಿದ್ದರು. ಈಗಲೂ ಅದೇ ಮಹಿಳಾ ಸಭಾ ಇದೆ. ಹಲವು ಬಾರಿ ಸತ್ಯಾಗ್ರಹಕ್ಕೆ ಹೋಗಿ ಸೆರೆವಾಸ ಅನುಭವಿಸಿದ್ದ ಸದಾಶಿವ ರಾಯರು ತಮ್ಮ ಎಳೆಯ ಮಗನ ಚಿಕಿತ್ಸೆ ಫಲಕಾರಿಯಾಗದೆ ಮಗನ ಪಾರ್ಥಿವ ದೇಹ ಬರುವಾಗಲೂ ಅವರು ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹದಲ್ಲಿ ನಿರತರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡು ಭಾಗಗಳಲ್ಲಿ ಖಾದಿ ಘಟಕಗಳನ್ನು ಸ್ಥಾಪಿಸಿ ಕರಕುಶಲ ಕರ್ಮದ ಶಿಕ್ಷಣ ಕೊಡಿಸಿದ್ದರು. ಕುದ್ಮಲ್ ರಂಗರಾಯರ ಡಿಪ್ರೆಸ್ಡ್ ಕ್ಲಾಸಸ್ ಮಿಷನ್ ನಲ್ಲೂ ಕೆಲಸ ಮಾಡಿದ್ದರು. 21 ರಾಷ್ಟ್ರೀಯ ಶಾಲೆಗಳನ್ನು ತೆರೆದಿದ್ದರು. ಶ್ರೀಹರಿಯ ಭಕ್ತರಾಗುದ್ದ ಸದಾಶಿವ ರಾಯರು ಧಾರ್ಮಿಕ ಸಮನ್ವಯದ ಪ್ರತೀಕರಾಗಿದ್ದು ಅವರ ಅಂತಿಮ ಯಾತ್ರೆಗೆ ಹಿಂದೂಗಳು ಹೂವುಗಳಿಂದ, ಕ್ರೈಸ್ತರು ಮೇಣದ ಬತ್ತಿಗಳಿಂದ, ಮುಸ್ಲಿಮರು ಧೂಪ ಲೋಬಾನಗಳಿಂದ, ಪಾರ್ಸಿಗಳು ಚಂದನದ ತುಂಡುಗಳಿಂದ ಗೌರವಾರ್ಪಣೆ ಮಾಡಿದ್ದರು. ಸ್ತ್ರೀ ಸ್ವಾತಂತ್ರ್ಯದ ಪ್ರತಿಪಾದಕರಾಗಿದ್ದ ಅವರು ತಿಲಕ್ ವಿದ್ಯಾಲಯದ ಮೂಲಕ ಹಿಂದಿಯ ಪ್ರಚಾರ ಕಾರ್ಯವನ್ನೂ ಮಾಡಿದ್ದರು. ಈಗ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಜಾಗದಲ್ಲಿ ಕಾರ್ನಾಡ್ ಸದಾಶಿವ ರಾಯರ ಮನೆ ಇತ್ತು. ಅವರು ಸಾಲಪಡೆದುಕೊಂಡಿದ್ದವರು ಆಸ್ತಿಯ ಬೆಲೆ ಕಡಿಮೆ ಇದ್ದಾಗ ಮತ್ತು ಸದಾಶಿವ ರಾಯರು ಜೈಲಿನಲ್ಲಿದ್ದಾಗ ಅವರ ಈ ಮನೆಯನ್ನು ಹರಾಜು ಹಾಕಿಸಿದ್ದರು. ಹರಾಜನ್ನು ತಡೆಯಲು ತಡೆಯಾಜ್ಞೆ ತರಬಹುದೆಂದು ವಕೀಲರಾಗಿದ್ದ ಕೆ. ಆರ್. ಆಚಾರ್ ತಿಳಿಸಿದರೂ ಸದಾಶಿವ ರಾಯರ ತಾಯಿ ರಾಧಾ ಬಾಯಿ," ಮಗ ಯಾವ ಕೆಟ್ಟದನ್ನೂ ಮಾಡಲಿಲ್ಲ. ಸಾಲವನ್ನು ತೀರಿಸಬೇಕಾದ್ದು ನಮ್ಮ ಜವಾಬ್ದಾರಿ" ಎಂದು ಮನೆಯನ್ನು ಬಿಟ್ಟು ಕದ್ರಿಯ ಬಳಿ ಬಾಡಿಗೆ ಮನೆಗೆ ಹೋಗಿದ್ದರು. ಮಹಾತ್ಮಾ ಗಾಂಧಿ, ಜವಾಹರ ಲಾಲ್ ನೆಹರೂ, ಸರೋಜಿನಿ ನಾಯ್ಡು ದಕ್ಷಿಣ ಕನ್ನಡ ಭಾಗಕ್ಕೆ ಬಂದಾಗ ಸದಾಶಿವ ರಾಯರಲ್ಲೇ ತಂಗುತ್ತಿದ್ದರು.

ಸದಾಶಿವ ರಾಯರು ಮೃತರಾಗಿ ಒಂದು ವರ್ಷದ ನಂತರ ಸದಾಶಿವ ರಾಯರ ಜನ್ಮದಿನವಾದ ಯುಗಾದಿಯಂದೇ ಅವರ ತಾಯಿ ಮೃತರಾದರು. ಸದಾಶಿವ ರಾಯರ ಹಿರಿಯ ಮಗಳು ಸುಗುಣಾ ವಿವಾಹಿತೆಯಾದರೂ ಮಕ್ಕಳಿರಲಿಲ್ಲ. ಸುಗುಣಾ ಅವರು 8 ಮಾರ್ಚ್ 1976 ರಂದು ನಿಧನರಾದರು. ಎರಡನೆಯ ಮಗಳು ಡಾ. ರಾಧಾ ಅವಿವಾಹಿತೆ. 6 ಮಾರ್ಚ್ 1977 ರಂದು ನಿಧನರಾದರು. ಸದಾಶಿವ ರಾಯರ ಸ್ಮರಣಾರ್ಥ ಬೆಂಗಳೂರಿನಲ್ಲಿ 65 ನೆಯ ಕಾಂಗ್ರೆಸ್ ಅಧಿವೇಷನ ನಡೆದ ಜಾಗವನ್ನು 'ಸದಾಶಿವ ನಗರ' ಎಂಬ ಹೆಸರಿನಿಂದ ಕರೆಯಲಾಗಿದೆ. ■

ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಜಾಗತಿಕ ಮನ್ನಣೆ ದೊರಕಿಸಿಕೊಟ್ಟ ಪತ್ರಕರ್ತ;

ವೆಬ್ ಮಿಲ್ಲರ್



– ಡಾ. ಎನ್.ಜಗದೀಶ್ ಕೊಪ್ಪ

ತಾನು ನೋಡುವ ಜಗತ್ತು ಮತ್ತು ಗ್ರಹಿಸುವ ಒಳನೋಟಗಳ ಮೂಲಕ ಒಬ್ಬ ಪತ್ರಕರ್ತ ಜಗತ್ತಿನ ಗ್ರಹಿಕೆಗಳನ್ನು ಹೇಗೆ ಬದಲಿಸಬಲ್ಲ ಎಂಬುದಕ್ಕೆ ಅಮೇರಿಕಾದ ಪತ್ರಕರ್ತ ವೆಬ್ ಮಿಲ್ಲರ್ ನ ಸಾಹಸದ ಬದುಕು ಇಂದಿಗೂ ನಮಗೆ ಮಾದರಿಯಾಗಿದೆ. 1930 ರಲ್ಲಿ ಭಾರತದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಚಳುವಳಿಯನ್ನು "The Marchers Simply Walked Forward Until Struck Down" ಎಂಬ ಒಂದು ವರದಿಯ ಮೂಲಕ ಭಾರತ ಸ್ವಾತಂತ್ರ್ಯ ಚಳುವಳಿಗೆ ಜಾಗತಿಕ ಮನ್ನಣೆ ದೊರಕಿಸಿಕೊಡುವುದರ ಮೂಲಕ .ಈ ಜಗತ್ತು ಕಂಡ ಶ್ರೇಷ್ಠ ಪತ್ರಕರ್ತರಲ್ಲಿ ಒಬ್ಬನಾಗಿರುವ ವೆಬ್ ಮಿಲ್ಲರ್. ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿದ್ದಾನೆ. ಇದಕ್ಕಿಂತ ಮುಖ್ಯವಾಗಿ ತಾನು ವಶಪಡಿಸಿಕೊಂಡ ವಸಹಾತು ಪ್ರದೇಶಗಳಲ್ಲಿ ಇಂಗ್ಲೇಂಡ್ ದೇಶವು ಅಲ್ಲಿನ ನಾಗರೀಕರ ಮೇಲೆ ಹೇಗೆ ಕ್ರೌರ್ಯದಿಂದ ಮೆರೆಯುತ್ತಿತ್ತು ಎಂಬುದನ್ನು ಜಗತ್ತಿನ ಮುಂದೆ ಅನಾವರಣಗೊಳಿಸಿ, ಅಪರಾಧ ಪ್ರಜ್ಞೆಯಿಂದ ತಲೆ ತಗ್ಗಿಸುವಂತೆ ಮಾಡಿದ ಮಹಾನ್ ಮಾನವತಾವಾದಿ.

ವೆಬ್ ಮಿಲ್ಲರ್ ಅಮೇರಿಕಾದ ಮಿಚಿಗನ್ ನಲ್ಲಿ 1891 ರಲ್ಲಿ ಜನಿಸಿದವನು. ವಿದ್ಯಾಭ್ಯಾಸ ನಂತರ ಬರಹಗಾರನಾಗಬೇಕೆಂಬ ಹಂಬಲದಿಂದ ಚಿಕಾಗೋ ನಗರದಕ್ಕೆ ಬಂದು ಸೌತ್ ಬೆಂಡ್ ಟ್ರಿಬ್ಯೂನ್ ಮತ್ತು ಸೌತ್ ಬೆಂಡ್ ಇಂಡಿಯಾನ ಪತ್ರಿಕೆಗಳಲ್ಲಿ ಕೆಲಸ ಮಾಡಿದವನು. ಆನಂತರ ಮಿಚಿಗನ್ ಡೈಲಿ ಎಂಬ ಪ್ರಸಿದ್ಧ ದಿನಪತ್ರಿಕೆಗೆ ಯುದ್ಧ ಕುರಿತ ವರದಿಗಳಿಗಾಗಿ ವಿಶೇಷ ವರದಿಗಾರನಾಗಿ ನೇಮಕಗೊಂಡ. ಪ್ರಥಮ ವಿಶ್ವ ಮಹಾಯುದ್ಧ. ಸ್ಪೇನ್ ದೇಶದ ಆಂತರೀಕ ಯುದ್ಧ, ರಷ್ಯಾ–ಫಿನ್ಲೆಂಡ್ ಯುದ್ಧ ಮತ್ತು ಇಟಲಿ ದೇಶವು ಪಶ್ಚಿಮ ಆಫ್ರಿಕಾದ ಇಥಿಯೋಫಿಯಾವನ್ನು ವಶಪಡಿಸಿಕೊಂಡ ಯುದ್ಧದ ವರದಿಗಳನ್ನು ರೋಚಕವಾಗಿ ಬರೆದು ಅಮೇರಿಕಾ ಮಾತ್ರವಲ್ಲದೆ, ಜಗತ್ತಿನಾದ್ಯಂತ ಪ್ರಸಿದ್ಧ ಯುದ್ಧ ವರದಿಗಾರನಾಗಿ ಹೆಸರು ಮಾಡಿದವನು. 1922 ರಲ್ಲಿ ಫ್ರಾನ್ಸ್ ದೇಶದ ಪ್ರಸಿದ್ಧ ಸರಣಿ ಹಂತಕ ಹೆನ್ರಿ ಡಿಸೈರ್ ಎಂಬಾತನಿಗೆ ಅಲ್ಲಿನ ಸರ್ಕಾರ ಮರಣ ದಂಡನೆ ವಿಧಿಸಿದ ಸಂದರ್ಭದಲ್ಲಿ ಅಪರಾಧಿಯನ್ನು ಸಂದರ್ಶಿಸಿ, ಆತನ ಕೃತ್ಯಗಳ ಕುರಿತು ಸರಣಿ ಲೇಖನಗಳನ್ನು ಬರೆದ. ಈ ಸರಣಿ ಲೇಖನಗಳ ಮಾಲೆಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಸಹ ದೊರೆಯಿತು.

1930 ರಲ್ಲಿ ಭಾರತದ ಗುಜರಾತಿನ ಸೂರತ್ ಬಳಿಯ ದಂಡಿ ಎಂಬ ಕಡಲ ಕಿನಾರೆ ಬಳಿ ಗಾಂಧೀಜಿಯವರು ಹಮ್ಮಿಕೊಂಡಿದ್ದ ಉಪ್ಪಿನ ಸತ್ಯಾಗ್ರಹವನ್ನು ವರದಿ ಮಾಡಲು ವೆಬ್ ಮಿಲ್ಲರ್ ಭಾರತಕ್ಕೆ ಆಗಮಿಸಿದನು. ದುರಾದೃಷ್ಟವಶಾತ್ ಅವನು ಭಾರತಕ್ಕೆ ಬರುವ ವೇಳೆಗೆ ಗಾಂಧೀಜಿಯವರು ಅಹಮದಾಬಾದಿನ ಸಬರ ಮತಿ ಆಶ್ರಮದಿಂದ 130 ಮೈಲುಗಳ ದಂಡಿಯಾತ್ರೆಯನ್ನು ಆರಂಭಿಸಿ, ದಂಡಿಯಲ್ಲಿ ಒಂದು ಹಿಡಿ ಉಪ್ಪನ್ನು ಎತ್ತಿ ಹಿಡಿಯುವುದರ ಮೂಲಕ ಬ್ರಿಟೀಷರಿಂದ ಬಂಧನಕ್ಕೆ ಒಳಗಾಗಿದ್ದರು. ಆದರೆ, ಅವರ ಅನುಯಾಯಿಗಳು ಸತ್ಯಾಗ್ರಹವನ್ನು ಮುಂದುವರಿಸಿದ್ದರು.

ಸರೋಜಿನಿ ನಾಯ್ಡು ನೇತೃತ್ವದಲ್ಲಿ ದರುಶನ ಎಂಬ ಪ್ರದೇಶದಲ್ಲಿ ತಂಡೋಪ ತಂಡವಾಗಿ ಸತ್ಯಾಗ್ರಹಿಗಳು ಚಳುವಳಿಯಲ್ಲಿ ಪಾಲ್ಗೊಂಡು ಯಾವೊಂದು ಪ್ರತಿರೋಧ ಒಡ್ಡದೆ ಪೊಲೀಸರ ಲಾಠಿಯೆಟು ಹಾಗೂ ಬೂಟಿನೇಟು ತಿಂದು, ತಲೆ ಬುರುಡೆ ಒಡೆಸಿಕೊಂಡು ನೆಲಕ್ಕುರುಳವ ದೃಶ್ಯಗಳಿಗೆ ಸಾಕ್ಷಿಯಾದ ವೆಬ್ ಮಿಲ್ಲರ್ ಅಕ್ಷರಶಃ ನಡುಗಿ ಹೋದ. ಆತ ಅಲ್ಲಿಯವರೆಗೆ ಅಹಿಂಸೆ ಯ ಪರಿಕಲ್ಪನೆ ಕುರಿತು ಮಾತ್ರ ಕೇಳಿ ತಿಳಿದಿದ್ದ ಆದರೆ, ಗಾಂಧೀಜಿಯವರು ಅಹಿಂಸೆಯನ್ನು ಆಚರಣೆಗೆ ತಂದು, ಈ ರೀತಿಯಲ್ಲಿ ತಮ್ಮ ಅನುಯಾಯಿಯಗಳ ಪಡೆಯನ್ನು ಸಜ್ಜುಗೊಳಿಸಿದ್ದಾರೆ ಎಂದು ಅವನು ಊಹಿಸಿರಲಿಲ್ಲ. ಅಂದಿನ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರ ಚಳುವಳಿ ಕುರಿತ ವರದಿಗಳ ಮೇಲೆ ವಿಶೇಷವಾಗಿ ಭಾರತದ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಿತ್ತು. ಆದರೆ,


ವೆಬ್ ಮಿಲ್ಲರ್

ವಿದೇಶಿ ಮಾಧ್ಯಮಗಳ ಮೇಲೆ ಅಂತಹ ನಿರ್ಬಂಧ ಇರದಿದ್ದರೂ ವರದಿಗಳ ಮೇಲೆ ಕಣ್ಗಾವಲು ಇರಿಸಿತ್ತು. ಆದರೆ, ಇವೆಲ್ಲವನ್ನೂ ಮೀರಿ ವೆಬ್ ಮಿಲ್ಲರ್ ಚಿತ್ರಗಳ ಸಮೇತ ವರದಿಯನ್ನು ಅಮೇರಿಕಾದ ತನ್ನ ಮಿಚಿಗನ್ ಡೈಲಿ ಪತ್ರಿಕೆಗೆ ಕಳಿಹಿಸುವಲ್ಲಿ ಯಶಸ್ವಿಯಾಗಿದ್ದ. ಈ ವಿಷಯವನ್ನು ತಿಳಿದ ಬ್ರಿಟೀಷ್ ಸರ್ಕಾರ ವರದಿಯನ್ನು ತಡೆಯಲು ಶತ ಪ್ರಯತ್ನ ಮಾಡಿತು. ಆದರೆ, ಪತ್ರಿಕೆಯು ತನಗೆ ಎದುರಾದ ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಭಾರತದಲ್ಲಿ ನಡೆಯುತ್ತಿರುವ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟವನ್ನು ಪ್ರಕಟಿಸಿತು. ಜೊತೆಗೆ ಬ್ರಿಟಿಷ್ ಸರ್ಕಾರದ ಹಿಂಸಾತ್ಮಕ ಕೃತ್ಯಗಳನ್ನು ಚಿತ್ರಗಳ ಸಮೇತ ಜಗತ್ತಿನೆದುರು ಅನಾವರಣಗೊಳಿಸಿತು. ಆ ಕಾಲದಲ್ಲಿ ಈ ವರದಿಯನ್ನು ಜಗತ್ತಿನ 1350 ಪತ್ರಿಕೆಗಳು ಮರು ಮುದ್ರಣ ಮಾಡಿದವು. ಅಮೇರಿಕಾದ ನಾಗರೀಕರು ಈ ವರದಿಯನ್ನು ಎರಡು ಲಕ್ಷದ ಐವತ್ತು ಸಾವಿರ ಕರಪತ್ರಗಳ ಮೂಲಕ ಮುದ್ರಿಸಿ ಅಮೇರಿಕಾದ್ಯಂತ ಹಂಚಿದರು. ಪ್ರಪಥಮಬಾರಿಗೆ ಸೂರ್ಯ ಮುಳಗದ ಸಾಮ್ರಾಜ್ಯವೆಂಬ ಇಂಗ್ಲೇಂಡ್ ದೇಶವು ಜಗತ್ತಿನೆದುರು ತಲೆ ತಗ್ಗಿಸಿ ನಿಂತಿತು. ಗಾಂಧೀಜಿ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಜಗತ್ತಿನಾದ್ಯಂತ ವಿಶೇಷವಾದ ಅನುಕಂಪ ಮತ್ತು ಗೌರವ ಬೆಳೆಯಿತು.

1931 ರಲ್ಲಿ ಗಾಂಧೀಜಿಯವರು ದುಂಡು ಮೇಜಿನ ಸಭೆಗಾಗಿ ಲಂಡನ್ ನಗರಕ್ಕೆ ತೆರಳಿದಾಗ, ವೆಬ್ ಮಿಲ್ಲರ್ ನನ್ನು ಬೇಟಿಯಾದ ಸಂದರ್ಭದಲ್ಲಿ ಈ ವರದಿಯಿಂದ ಭಾರತಕ್ಕೆ ಆಗಿರುವ ಅನಕೂಲವನ್ನು ಸ್ವತಃ ಒಪ್ಪಿಕೊಂಡರು. ವೆಬ್ ಮಿಲ್ಲರ್ ಗೆ ಒಂದು ಅಭ್ಯಾಸವಿತ್ತು. ಜಗತ್ತಿನ ಯಾವುದೇ ನಾಯಕರನ್ನು ಭೇಟಿಯಾದಾಗ ತನ್ನ ಸಿಗರೇಟ್ ಪ್ಯಾಕಿನ ಮೇಲೆ ಅವರ ಹಸ್ತಾಕ್ಷರ ಪಡೆಯುತ್ತಿದ್ದನು. ಜೊತೆಗೆ ಅವುಗಳನ್ನು ಸಂಗ್ರಹಿಸಿ ಇಡುತ್ತಿದ್ದನು. ಇಟಲಿಯ ಮುಸಲೋನಿ, ರಷ್ಯಾದ ಸ್ಟಾಲಿನ್ , ಅಮೇರಿಕಾದ ರೂಸ್ ವೆಲ್ಟ್, ಜರ್ಮನಿಯ ಹಿಟ್ಲರ್ ಹೀಗೆ ಅನೇಕ ನಾಯಕರ ಸಹಿಗಳನ್ನು ಸಂಗ್ರಹಿಸಿದ್ದನು. ಗಾಂಧೀಜಿಯವರನ್ನು ಭೇಟಿಯಾದ ಸಂದರ್ಭದಲ್ಲಿ ಸಿಗರೇಟ್ ಪ್ಯಾಕ್ ಮೇಲೆ ಸಹಿ ಮಾಡಲು ಕೋರಿದಾಗ, ಗಾಂಧೀಜಿಯವರು ವೆಬ್ ಮಿಲ್ಲರ್ ಗೆ ಒಂದು ಷರತ್ತನ್ನು ವಿಧಿಸಿದರು. " ಇನ್ನು ಮುಂದೆ ನೀವು ಸಿಗರೇಟ್ ತ್ಯೆಜಿಸುವುದಾದರೆ ಮಾತ್ರ ನಾನು ಸಹಿ ಮಾಡುತ್ತೇನೆ" ಎನ್ನುತ್ತಾ, ನಗುತ್ತಲೇ ಆತನ ಪ್ರತಿಕ್ರಿಯೆಗೆ ಕಾಯದೆ ಹಸ್ತಾಕ್ಷರ ಹಾಕಿದರು. ಆಶ್ಚರ್ಯವೆಂದರೆ, ಅನಂತರ ವೆಬ್ ಮಿಲ್ಲರ್ ಸಿಗರೇಟ್ ಗೆ ವಿದಾಯ ಹೇಳಿದ್ದ. ಇಂತಹ ಅಪ್ರತಿಮ ಪತ್ರಕರ್ತ ತನ್ನ 49 ನೇ ವಯಸ್ಸಿನಲ್ಲಿ ಅಂದರೆ, 1940 ರಲ್ಲಿ ಲಂಡನ್ ನಗರದ ಸುರಂಗ ಮಾರ್ಗದಲ್ಲಿ ನಡೆದ ಅಪಘಾತದಲ್ಲಿ ನಿಧನ ಹೊಂದಿದನು.


ಭಾರತದ ಸ್ವಾತಂತ್ರ್ಯ ಹೊರಾಟವನ್ನು ನಾವು ಕೇವಲ ಘಟನೆಗಳಾಗಿ ಗ್ರಹಿಸಿ, ಇತಿಹಾಸ ರಚಿಸಿರುವುದಕ್ಕೂ, ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ಪತ್ರಕರ್ತರು ಅವುಗಳನ್ನು ಚಾರಿತ್ರಿಕ ಘಟನೆಗಳೆಂದು ಭಾವಿಸುವುದರ ಮೂಲಕ ವಿವಿಧ ಆಯಾಮಗಳಿಂದ ಪರಿಶೀಲಿಸಿ ಗ್ರಹಿಸುವುದಕ್ಕೂ ಏನೆಲ್ಲಾ ವೆತ್ಯಾಸಗಳಿವೆ ಎಂಬುದಕ್ಕೆ ವೆಬ್ ಮಿಲ್ಲರ್ ಉಪ್ಪಿನ ಸತ್ಯಾಗ್ರಹ ಕುರಿತ ಒಂದು ವರದಿ ಇಂದಿಗೂ ನಮಗೆ ಉದಾಹರಣೆಯಾಗಿದೆ.

■



ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ .ವೂಡೇ ಪಿ ಕೃಷ್ಣ ಅವರನ್ನು ದೆಹಲಿಯಲ್ಲಿರುವ ಕೇಂದ್ರ ಸ್ಮಾರಕ ನಿಧಿಯ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷರಾಗಿರುವ ವೂಡೇ ಪಿ ಕೃಷ್ಣ ಅವರು ಹಲವಾರು ಪ್ರತಿಷ್ಠಿತ ಸಂಘ ಸಂಸ್ಥೆಗಳ ಸದಸ್ಯರಾಗಿದ್ದಾರೆ. ಈ ಸಂದರ್ಭದಲ್ಲಿ ಗಾಂಧಿ ಬಳಗದ ಪರವಾಗಿ ಅವರನ್ನು ಅಭಿನಂದಿಸಲಾಗಿದೆ.

ಗಾಂಧಿ ಅಂಬೇಡ್ಕರ್ – ಒಂದಿಷ್ಟು ಮಾತು



– ದೇವನೂರು ಮಹಾದೇವ

ಇಂದು ಗಾಂಧಿ ಮತ್ತು ಅಂಬೇಡ್ಕರ್ ಅವರ ಕೃತಿ ಮತ್ತು ವ್ಯಕ್ತಿತ್ವಗಳು ಪ್ರಭಾವಿಸುತ್ತಿರುವ ರೀತಿಗಳು ಬೇರೆ ಬೇರೆಯಾಗೇ ಇವೆ. ಇದನ್ನು ಅರ್ಥ ಮಾಡಿಕೊಳ್ಳಲು ಗೆಳೆಯ ಸಿದ್ದಲಿಂಗಯ್ಯನವರ ಗ್ರಹಿಕೆ: ಅಜ್ಜ ಮೊಮ್ಮಗನಿಗೆ ಗಾಂಧಿಯ ಬಗ್ಗೆ ಹೇಳುತ್ತಾನೆ– ನಮ್ಮ ಕಾಲದಲ್ಲಿ ಮಹಾತ್ಮಾಗಾಂಧಿ ಅಂತ ಒಬ್ಬರು ಇದ್ದರು. ಅವರು ಬ್ರಿಟೀಷರನ್ನು ಓಡಿಸಿ ಸ್ವಾತಂತ್ರ್ಯವನ್ನು ತಂದುಕೊಟ್ಟರು. ನಾವು ಈಗ ಇರುವ ಸ್ಥಿತಿಗತಿಗೆ ಗಾಂಧಿನೇ ಕಾರಣ.

ಅದೇ ಅಂಬೇಡ್ಕರ್ ಬಗ್ಗೆ ಮೊಮ್ಮಗ ಅಜ್ಜನಿಗೆ ಹೇಳುತ್ತಾನೆ– ಅಜ್ಜಾ ನೀನು ಚಿಕ್ಕವನಿದ್ದಾಗ ಅಂಬೇಡ್ಕರ್ ಅಂತ ನಮ್ಮವರೊಬ್ಬರು ಇದ್ದರು. ಅವರು ನಮ್ಮ ಜನಾಂಗಕ್ಕಾಗಿ ತುಂಬಾ ಹೋರಾಡಿದರು. ನಾವು ಈಗ ಇರುವ ಸ್ಥಿತಿಗತಿಗೆ ಅಂಬೇಡ್ಕರ್ ಕಾರಣ. ಗಾಂಧಿ ಬಗ್ಗೆ ಮಾಗಿದ ಹಣ್ಣು ಹೀಚಿಗೆ ಹೇಳಿದರೆ, ಅಂಬೇಡ್ಕರ್ ಬಗ್ಗೆ ಹೀಚು ಮಾಗಿದ ಹಣ್ಣಿಗೆ ಹೇಳುತ್ತದೆ!

ಹಾಗಾಗಿ ಮೊದಲದರಲ್ಲಿ ನಿಧಾನತೆ ಇದ್ದರೆ ಎರಡನೆಯದರಲ್ಲಿ ವೇಗ ಇದೆ. ಈ ನಡಿಗೆಯಿಂದಾಗಿ ಒಂದೇ ಆಶಯವು ಪರಸ್ಪರ ವಿರುದ್ಧವಾಗಿ ಕಾಣಲೂಬಹುದು. ದಲಿತರ ಮೊದಲ ವಿದ್ಯಾವಂತ ತಲೆಮಾರು ಗಾಂಧಿ ಅಂಬೇಡ್ಕರರ ಆಶಯಗಳ ನಾಡಿ ಹಿಡಿದು ಈ ಬಿಕ್ಕಟ್ಟಿನಿಂದ ಪಾರಾಗಿತ್ತು ಎಂದು ಕಾಣುತ್ತದೆ. ಯಾಕೆಂದರೆ ದಲಿತರ ನವ ಪೀಳಿಗೆ ಅಂಬೇಡ್ಕರ್ ಫೋಟೋ ಮಾತ್ರ ಇಟ್ಟುಕೊಂಡರೆ ದಲಿತರ ಹಿಂದಿನ ತಲೆಮಾರು ಗಾಂಧಿ ಮತ್ತು ಅಂಬೇಡ್ಕರ್ ಈ ಇಬ್ಬರ ಫೋಟೋಗಳನ್ನೂ ಇಟ್ಟುಕೊಂಡಿರುತ್ತಿತ್ತು.


ಹಾಗಾದರೆ ದಲಿತರ ಹಿಂದಿನ ತಲೆಮಾರು ಗಾಂಧಿ, ಅಂಬೇಡ್ಕರರ ಜಗಳವನ್ನು ಹೇಗೆ ಕಂಡಿತ್ತು? ಮಕ್ಕಳ ಹಿತಕ್ಕಾಗಿ ಎಂದುಕೊಂಡು ಜಗಳಮಾಡುವ ಅಪ್ಪ ಅಮ್ಮನಂತೆ? ಈಗಲ್ಲದಿದ್ದರೆ ಈ ಇಬ್ಬರ ಫೋಟೋಗಳನ್ನು ಒಟ್ಟಿಗೆ ಇಟ್ಟುಕೊಳ್ಳಲು ಹೇಗೆ ಸಾಧ್ಯ? ಉದಾ: ಮಗುವನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಬೇಕು ಅಂತ ಅಪ್ಪ ವಾದಿಸುತ್ತಾನೆ. ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಬೇಕು ಅಂತ ಅಮ್ಮ ವಾದಿಸುತ್ತಾಳೆ. ಜಗಳವಾಗುತ್ತದೆ. ಆದರೆ ಜಗಳದಲ್ಲಿ ಏನಿದೆ? ಮಗುವಿನ ಹಿತವೇ ಅಲ್ಲವೇ? ಪೂನಾ ಒಪ್ಪಂದದಲ್ಲೂ ಏನಿದೆ? " ನನ್ನಲ್ಲಿ ತಪ್ಪಿದೆ, ನಿಜ. ಹಾಗಂತ ಡೈವೋರ್ಸ್ ಕೊಡಬೇಡ " ಎಂಬುದು ತಾನೆ?



ಹಾಗೆ ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಗಾಂಧಿ ಮತ್ತು ಅಂಬೇಡ್ಕರ್ ರನ್ನು ಪರಸ್ಪರ ವಿರೋಧಿಗಳನ್ನಾಗಿಸುತ್ತೇವೆ. ಅಂಬೇಡ್ಕರ್ ಅವರದು ತಾರ್ಕಿಕ ದೃಷ್ಟಿಕೋನವಾದರೆ ಗಾಂಧಿಯವರು ತರ್ಕಾತೀತ ದೃಷ್ಟಿಕೋನದವರು. ಹಾಗಾಗಿ ಸಮಕಾಲೀನರ ನಡುವೆ ಜಗಳವೂ ನಡೆಯಬಹುದು. ಇದನ್ನು ನಾವು ಪರಿಣಾಮದಲ್ಲಿ ನೋಡಬೇಕು. ಯಾಕೆ ಉಗ್ರ ಹಿಂದೂ ಗೋಡ್ಸೆ ಗಾಂಧಿಯನ್ನು ಕೊಂದ? ಗಾಂಧಿ ಸತ್ತಾಗ ಬ್ರಾಹ್ಮಣ ವಠಾರವು " ವರ್ಣಸಂಕರ ಮಾಡುವ ಕಲಿಕೆಯ ಅವತಾರ ಸಧ್ಯ ಕೊನೆಗೊಂಡಿತು " ಎಂದು ಯಾಕೆ ಸಮಾಧಾನಪಟ್ಟಿತು? ಹೀಗಾದರೆ ಗಾಂಧಿ ಹಿಂದೂ ಧರ್ಮದಲ್ಲಿ ಮಾಡುತ್ತಿದ್ದುದಾದರೂ ಏನು? ಗಾಂಧಿ ಅಸಮಾನತೆಯ ಹಿಂದೂಧರ್ಮ ಎಂಬ ಬಚ್ಚಲ ಕೊಳಕು ನೀರನ್ನು ಭಟ್ಟಿ ಇಳಿಸುತ್ತ ತಿಳಿಗೊಳಿಸುತ್ತಿದ್ದರು. ಚಿಟ್ಟೆಯಾಗಲಾರದ ಬಚ್ಚಲು ಹುಳುಗಳಿಗೆ ಉಸಿರು ಕಟ್ಟಿತು. ಇದನ್ನು ಹೀಗಲ್ಲದೆ ಬೇರೆ ಯಾವ ರೀತಿ ಅರ್ಥಮಾಡಿಕೊಳ್ಳಲು ಸಾಧ್ಯ? ಕೊನೆ ಕೊನೆಯಲ್ಲಿ ಅಂತರ್ಜಾತಿಯ ಮದುವೆಗೆ ಮಾತ್ರ ಹೋಗಿ ಆಶೀರ್ವದಿಸುವ ನಿಲುವಿಗೆ ಬರುವ ಗಾಂಧಿಯನ್ನು ಮತ್ತೆ ಹೇಗೆ ಅರ್ಥಮಾಡಿಕೊಳ್ಳಬೇಕು?

ಹಿಂದೂ ಧರ್ಮ ಎಂಬ ಮನೆಯೊಳಗೆ ಭಿನ್ನಭಾವ ಜಾತಿ ತಾರತಮ್ಯದ ಕಂಬಗಳನ್ನು ಒಳಗೊಳಗೇ ಕೊಯ್ಯುವವನಂತೆ ಗಾಂಧಿ ಕಾಣಿಸುತ್ತಾರೆ. ಅದೇ ಅಂಬೇಡ್ಕರ್ ಹೊರಗಿನಿಂದ ಆ ಅಸಮಾನತೆಯ ಮನೆಗೆ ಕಲ್ಲೆಸೆಯುವವನಂತೆ ಕಾಣಿಸುತ್ತಾರೆ. ಈ ಪ್ರಕ್ರಿಯೆಯಿಂದಾಗಿ ಅಂಬೇಡ್ಕರ್ ಎಸೆದ ಕಲ್ಲು ಒಳಗಿದ್ದ ಗಾಂಧಿಗೂ ಬಿದ್ದು ರಕ್ತ ಚೆಲ್ಲಿರಬಹುದು. ಇದನ್ನು ಕಂಡು ಪರಲೋಕವು ಗಾಂಧಿಗೂ, ಅಂಬೇಡ್ಕರ್ ಗೂ ಮಾರಾಮಾರಿ ಹೊಡೆದಾಟ ಎನ್ನಬಹುದು. ಆದರೆ ಇಬ್ಬರೂ ಮಾಡುತ್ತಿದ್ದುದು ಹೆಚ್ಚೂಕಮ್ಮಿ ಒಂದೇ ಕೆಲಸವನ್ನಲ್ಲವೇ?

(ಎದೆಗೆ ಬಿದ್ದ ಅಕ್ಷರ ಕೃತಿಯಿಂದ)



ವಿದೇಶಿಯರ ಕಣ್ಣಲ್ಲಿ ಗಾಂಧಿ

–ರವಿಚಂದ್ರ ಜಂಗಣ್ಣವರ್

ಗಾಂಧಿ ಸದಾ ನಮ್ಮಲ್ಲಿ ಜಾಗೃತವಾಗಿರಬೇಕಾದ ಪ್ರಜ್ಞೆ, ಗಾಂಧೀಜಿ ಕುರಿತು ನಮ್ಮ ಜನರ ಅಭಿಪ್ರಾಯಗಳನ್ನು ನಾವು ಬಲ್ಲೆವು. ಜಗತ್ತೇ ನಿಬ್ಬೆರಗಾಗಿ ನೋಡಿದ ಈ ಆಧುನಿಕ ಸಂತನ ಕುರಿತು ವಿದೇಶೀಯರು ಏನು ಹೇಳಿದ್ದಾರೆ ಅನ್ನುವುದನ್ನೂ ನಾವು ಅರಿಯಬೇಕು.

ಈ ನಿಟ್ಟಿನಲ್ಲಿ ಗಾಂಧೀಜಿ ಕುರಿತು ಡಾ.ಹೇಯ್ನೆಸ್ ನೀಡಿದ್ದ ಉಪನ್ಯಾಸವನ್ನು ಇಲ್ಲಿ ನೀಡಿದ್ದೇವೆ.

ಇಂದು ಬೆಳಗ್ಗೆ ನಾನು ಭಾರತದ ಮಹಾತ್ಮಾ ಗಾಂಧಿ ಮತ್ತು ಅವರು ಕೈಗೊಂಡಿರುವ ಕಾರ್ಯದ ಜಾಗತಿಕ ಮಹತ್ವದ ಕುರಿತು ಮಾತನಾಡಲು ಬರುವಾಗ ಅಯಾಚಿತವಾಗಿ ಹಿಂದಿನ ಸಂದರ್ಭವೊಂದು ನನೆಪಿಗೆ ಬಂದಿತು. ಅದು ನಡೆದು ಬಹಳ ಸಮಯವೇನಾಗಿಲ್ಲ. ಆ ದಿನ ನಾನು ಇದೇ ಸಭೆಯಲ್ಲಿ ಮೊದಲ ಬಾರಿಗೆ ಗಾಂಧಿಯವರನ್ನು ಪರಿಚಯಿಸಿದ್ದೆ. ಅಂದು ಕೂಡ ನನಗೆ ಇಂದು ಇರುವಷ್ಟೇ ವಿಶ್ವಾಸವಿತ್ತು.

ಈ ವ್ಯಕ್ತಿ ಈ ಕಾಲಘಟ್ಟದಲ್ಲಿ ಜೀವಿಸಿರುವ ಅತಿಶ್ರೇಷ್ಠ ಮನುಷ್ಯನೆಂಬ ಭಾವನೆ ನನಗೆ ಅಂದಿಗೂ ಇಂದಿಗೂ ಸಮನಾಗಿದೆ. ಈ ಕೆಲವು ತಿಂಗಳಲ್ಲಿ ಏನೆಲ್ಲ ಬದಲಾಗಿಹೋಯಿತು! ಆ ಸಮಯದಲ್ಲಿ ಗಾಂಧಿಯವರ ಹೆಸರು ಭಾರತದ ಗಡಿಗಳಾಚೆ ಗೊತ್ತೇ ಇರಲಿಲ್ಲ. ಆಗ ನಾನು ನನ್ನಲ್ಲಿದ್ದ ಅತ್ಯಲ್ಪ ಮಾಹಿತಿ ಇಟ್ಟುಕೊಂಡು ಚಿಕ್ಕದಾಗಿ ವಿವರ ನೀಡುವ ಪ್ರಯತ್ನ ಮಾಡಿದ್ದೆ. ಆ ಸಮಯದಲ್ಲೇ ನನ್ನೊಳಗೆ, ಇಲ್ಲೊಬ್ಬ ಅತ್ಯುನ್ನತ ಮಟ್ಟದ ಸೃಜನಶೀಲ ಆಧ್ಯಾತ್ಮಿಕ ವ್ಯಕ್ತಿ ಇರುವರೆಂಬ ಭಾವನೆ ಉದಿಸಿತ್ತು, ಹಾಗಿದ್ದೂ ಅವರ ಕುರಿತು ಹೆಚ್ಚಿನ ಮಾಹಿತಿ ಕಲೆಹಾಕುವಲ್ಲಿ ನಾನು ವಿಫಲಗೊಂಡಿದ್ದೆ.

ಇಂದು ಗಾಂಧೀಜಿಯವರ ಹೆಸರು ಪತ್ರಿಕೆಗಳ ಮೊದಲ ಪುಟದಲ್ಲೇ ದಪ್ಪ ಅಕ್ಷರಗಳಲ್ಲಿ ಅಚ್ಚಾಗತೊಡಗಿದೆ. ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಲ್ಲಿ ಈ ದೇಶದ □ ಇಂಗ್ಲೆಂಡ್ ಹಾಗೂ ಖಂಡದ ಕುರಿತಾದ ವಿಮರ್ಶೆಗಳು ಹಾಗೂ ಲೇಖನಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಅಮೆರಿಕದ ಪ್ರತಿಷ್ಠಿತ ಪತ್ರಿಕೆ 'ದ ನ್ಯೂಯಾರ್ಕ್ ವರ್ಲ್ಡ್', ಗೂಢಚಾರ ವರದಿಗಾಗಿ ಭಾರತಕ್ಕೆ ತನ್ನ ಪತ್ರಕರ್ತನನ್ನು ಕಳಿಸಿದರೆ, ಆತ ಮರಳಿ ಬಂದು ಗಾಂಧಿ ಮತ್ತವರ ಅಹಿಂಸೆ ಹಾಗೂ ಅಸಹಕಾರ ಚಳವಳಿಗಳ ಕುರಿತಾಗಿ ಬರೆಯುತ್ತಾನೆ!

ಕೆಲವೇ ತಿಂಗಳಲ್ಲಿ ಈ ಮನುಷ್ಯ ಖ್ಯಾತಿಯ ಉತ್ತುಂಗಕ್ಕೆ ಏರಿದ್ದಾರೆ. ಅವರ ಈ ಸಾಧನೆ ಶಾಶ್ವತವಾಗಿ ನಿಲ್ಲುವ ಎಲ್ಲ ಭರವಸೆಯನ್ನೂ ಹೊತ್ತುಕೊಂಡಿದೆ. ಅವರೀಗ ಜಗತ್ತಿನ ಗಮನ ಸೆಳೆಯುವ ಕೇಂದ್ರಬಿಂದುವಿನಂತೆ ಆಗಿದ್ದಾರೆ. 1918 –19ರಲ್ಲಿ ವುಡ್ರೋ ವಿಲ್ಸನ್, 1920 –21ರಲ್ಲಿ ನಿಕೋಲೈ ಲೆನಿನ್ ಈ ಸ್ಥಾನವನ್ನು ಪಡೆದಿದ್ದರು. ಆದರೆ ಈಗ, ಈತನಕ ಯಾವುದೇ ಉನ್ನತ ಹುದ್ದೆ ಹೊಂದಿಲ್ಲದ, ಯಾವುದೇ ಅಧಿಕಾರದ ಪ್ರಭಾವಳಿ ಇಲ್ಲದ ಪುಟ್ಟ ನಿಲುವಿನ ಪೌರಸ್ತ್ಯ ವ್ಯಕ್ತಿಯೊಬ್ಬ ಈ ಸ್ಥಾನಕ್ಕೇರಿದ್ದಾರೆ. ಅದೂ ಕೂಡ, ಇಂಗ್ಲೀಷರ ಸೆರೆಯ ಸರಳುಗಳ ಹಿಂದೆ ಇದ್ದುಕೊಂಡು!

ಇಂಥಾ ಬದಲಾವಣೆಯ ಅದೃಷ್ಟ ಒಬ್ಬ ವ್ಯಕ್ತಿಯ ಪಾಲಿಗೆ ಒದಗಿಬಂದಿದೆ ಎಂದರೆ ಅದು ಸುಮ್ಮನೆ ಆಗಿರಲಿಕ್ಕಿಲ್ಲ. ಮುಂದೊಂದು ದಿನ ಏನೋ ಸಂಭವಿಸುವ ಸಲುವಾಗಿಯೇ ಈಗ ಇದು ಘಟಿಸುತ್ತಿದೆ. ಈ ಮಾತಿಗೆ ಬೆಂಬಲವಾಗಿ ನಾನು ಇಂದು ನಾಲ್ಕು ಘಟನೆಗಳನ್ನು ವಿವರಿಸುತ್ತೇನೆ. ಜಗತ್ತಿನ ದೂರದ ತುದಿಯಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಏನನ್ನು ಸೂಚಿಸುತ್ತದೆ ಎಂದು ಅರಿಯುವ ಪ್ರಯತ್ನ ಇದಾಗಲಿದೆ.

ಮೊದಲನೆಯದಾಗಿ, ಭಾರತದಲ್ಲಿ ಇತ್ತೀಚೆಗೆ ರಾಷ್ಟ್ರೀಯ ಪಕ್ಷವೊಂದು ವ್ಯಾಪಕವಾಗಿ ಹಬ್ಬತೊಡಗಿದೆ. ಕೆಲವೇ ವರ್ಷಗಳ ಹಿಂದೆ ಅಲ್ಲಿ ಒಂದಷ್ಟು ಜನರಷ್ಟೆ ಪ್ರತ್ಯೇಕ ಗುರುತು ಅಥವಾ ಸ್ವಾತಂತ್ರ್ಯವನ್ನು ಬಯಸುತ್ತಿದ್ದರು. ಅವರಲ್ಲಿ ಕೆಲವರು ತೀವ್ರವಾದಿಗಳೂ ಮತಾಂಧರೂ ಇದ್ದರು. ಪ್ರಜ್ಞಾವಂತ ಮುಂದಾಳುಗಳು ಹೋಮ್ರೂಲ್ ಅಥವಾ ಸಾಮ್ರಾಜ್ಯದೊಳಗೇ ಡೊಮಿನಿಯನ್ ಸ್ಟೇಟಸ್ ಸಿಕ್ಕರೆ ಸಾಕೆನ್ನುವ ಚಿಂತನೆ ನಡೆಸಿದ್ದರು. ಜನಸಾಮಾನ್ಯರು ಈ ಎಲ್ಲದರಿಂದ ಹೊರತಾಗಿ, ಅಥವಾ ಈ ಕುರಿತು ಮೌಢ್ಯತೆಯಿಂದ ತಮ್ಮ ಪಾಡಿಗೆ ಇರುತ್ತಿದ್ದರು.

ಆದರೆ ಇಂದು ಬ್ರಿಟಿಷ್ ಆಡಳಿತದಿಂದ ವಿಮೋಚನೆಗೊಳ್ಳಬೇಕೆನ್ನುವ ಕೂಗು ಕಾಳ್ಗಿಚ್ಚಿನಂತೆ ಹಬ್ಬತೊಡಗಿದೆ.

ಈಗಿನ ಸಂದರ್ಭದಲ್ಲಿ ಭಾರತದ ಕೆಲವು ರಾಜರುಗಳು, ಆಗರ್ಭ ಶ್ರೀಮಂತರು, ರಾಜಪರಿವಾರ, ಸರ್ಕಾರಿ ಹುದ್ದೆಯಲ್ಲಿರುವವರು ಮತ್ತು ಸಾಕಷ್ಟು ಸಂಖ್ಯೆಯ ನೌಕರರು ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯನ್ನು ಬಯಸುತ್ತಿಲ್ಲ ಎಂಬುದು ಸತ್ಯವೇ. ಅವರು ತಮ್ಮದೇ ಆದ ಕಾರಣಗಳಿಂದಾಗಿ ಬ್ರಿಟಿಷರಿಗೆ ಎಲ್ಲ

ಬಗೆಯ ಸಹಕಾರವನ್ನೂ ನೀಡುತ್ತಿರುವರು. ಆದರೆ ಈ ಸಂಖ್ಯೆ ಎಲ್ಲರನ್ನೂ ಒಗ್ಗೂಡಿಸಿದರೆ, ಹೆಚ್ಚೆಂದರೆ ಹತ್ತು ಲಕ್ಷದಷ್ಟು ಇರಬಹುದು. ಉಳಿದಂತೆ ಒಂದು ದೊಡ್ಡ ವರ್ಗವೇ ಇಂದು ಸ್ವಾತಂತ್ರ್ಯದ ಮಾತಾಡತೊಡಗಿದೆ. ಒಂದೆಡೆ ಸಾಮಾಜಿಕ ಬಹುಮನ್ನಣೆಯ ರಬೀಂದ್ರನಾಥ ಟಾಗೋರರಂಥವರು, ಮತ್ತೊಂದೆಡೆ ಅಸ್ಪೃಶ್ಯರೆನಿಸಿಕೊಂಡ ವರ್ಗದವರು ಸರಿಸಮಾನವಾಗಿ ಬ್ರಿಟಿಷ್ ಹಿಡಿತದಿಂದ ಹೊರಬರಬೇಕು ಅನ್ನುವ ಬಲವಾದ ಇಚ್ಛೆಯ ಕಿಚ್ಚನ್ನು ಹೊತ್ತಿಸುತ್ತಿದ್ದಾರೆ.

ನೆನಪಿಡಿ, ಭಾರತದ ಇಂದಿನ ಜನಸಂಖ್ಯೆ 30,00,00,000ಗೂ ಹೆಚ್ಚಿದೆ. ಇದು ವಿಶ್ವದ ಒಟ್ಟು ಜನಸಂಖ್ಯೆಯ ಐದನೇ ಒಂದು ಭಾಗದಷ್ಟು. ಈ ರಾಷ್ಟ್ರೀಯ ಚಳವಳಿ ಇದ್ದಕ್ಕಿದ್ದಂತೆ ಯಾಕೆ ಇಷ್ಟು ಮಹತ್ವ ಪಡೆಯುತ್ತಿದೆ ಎಂಬುದನ್ನು ನಾವು ಈಗ ಊಹಿಸಬಹುದು. ಭಾರತದಲ್ಲಿ ಈಗ ಮೂಡಿರುವ ಸಂಚಲನೆಯು, ಅದರಲ್ಲಿ ಪಾಲ್ಗೊಂಡಿರುವ ಜನಸಂಖ್ಯೆಯ ಕಾರಣದಿಂದ ಹೆಚ್ಚಿನ ಮಹತ್ವ ಪಡೆಯುತ್ತಿದ್ದು, ವಿಶ್ವಜೀವನದ ಕೇಂದ್ರ ವಿದ್ಯಮಾನವಾಗಿ ಪರಿಣಮಿಸಿದೆ.

ಎರಡನೆಯದಾಗಿ, ಗಾಂಧಿಯವರ ಹೆಸರು ಕೀರ್ತಿಗಳು ವೇಗಗತಿಯಲ್ಲಿ ಪ್ರವರ್ಧಮಾನಕ್ಕೆ ಬರುವಲ್ಲಿ ಆ ದೇಶದ ಜನರ ಆಶೋತ್ತರಗಳ ಕೊಡುಗೆ ಮುಖ್ಯವಾಗುತ್ತದೆ. ಭಾರತದ ಜನರು ಸದ್ಯಕ್ಕೆ ತಮ್ಮ ಸ್ವಾತಂತ್ರ್ಯ ಹೋರಾಟದ ನಾಯಕನಾಗಿ ಗಾಂಧೀಜಿಯನ್ನೇ ಆಯ್ದುಕೊಂಡಿದ್ದಾರೆ, ಅವರ ಮೇಲೆ ಭರವಸೆ ಇಟ್ಟಿದ್ದಾರೆ. ಕೆಲವೇ ವರ್ಷಗಳ ಹಿಂದೆ ಗಾಂಧೀಜಿ ಇಂಗ್ಲೆಂಡಿನ ಮಿತ್ರರಾಗಿದ್ದರು ಹಾಗೂ ಭಾರತದಲ್ಲಿ ರಾಣಿಯ ಆಳ್ವಿಕೆಯನ್ನು ಒಪ್ಪಿಕೊಂಡಿದ್ದರು. ಬ್ರಿಟನ್ ಸರ್ವಾಧಿಪತ್ಯದ ಲಾಭಗಳನ್ನೂ ಕೊಡುಗೆಗಳನ್ನೂ ಅನುಭವಿಸಿದ್ದರು. ಮಹಾಯುದ್ಧದ ಸಂದರ್ಭದಲ್ಲಿಯೂ ಅವರು ಬ್ರಿಟಿಷ್ ಮಿತ್ರಕೂಟವನ್ನು ಬೆಂಬಲಿಸಿದ್ದರು ಹಾಗೂ ಪ್ರತಿ ಬಾರಿಯೂ ಬ್ರಿಟನ್ ಸಾಮ್ರಾಜ್ಯದ ಪರವಾಗಿಯೇ ನಿಂತಿದ್ದರು. ಯುದ್ಧಾನಂತರ ಅವರು ಹೋಮ್ರೂಲ್ಗಿಂತ ಹೆಚ್ಚಾಗಿ ಸುಧಾರಣಾ ಕಾರ್ಯಗಳನ್ನು ತೀವ್ರವಾಗಿ ಪ್ರತಿಪಾದಿಸಿದ್ದರು.

ಹಾಗಾದರೆ ಗಾಂಧೀಜಿ ಬದಲಾಗಿದ್ದೆಲ್ಲಿ? ಈ ಪ್ರಶ್ನೆಗೆ ಉತ್ತರ ಹುಡುಕುತ್ತ ಹೋದರೆ ನಾವು ಜನರಲ್ ಡೈರ್ನ ಎದುರು ನಿಲ್ಲುತ್ತೇವೆ. ಜನರಲ್ ಡೈರ್ ಅಮೃತಸರದ ಜಲಿಯನ್ವಾಲಾ ಬಾಗ್ನಲ್ಲಿ ಸೇರಿದ್ದ ಮುಗ್ಧ ಭಾರತೀಯರ ಮೇಲೆ ಗುಂಡಿನ ಮಳೆಗರೆಯುವ ಆದೇಶ ಹೊರಡಿಸಿದ. ಇದರ ಪರಿಣಾಮವಾಗಿ ನಾನೂರಕ್ಕೂ ಹೆಚ್ಚು ಮಂದಿ ಹತ್ಯೆಗೀಡಾಗಿದ್ದರು. ಮುದುಕರು. ಹೆಂಗಸರು, ಮಕ್ಕಳೂ ಸೇರಿದಂತೆ ಅಲ್ಲಿ ಸೇರಿದ್ದ ಬಹುಪಾಲು ಜನರು ಸಾಮೂಹಿಕ ಹತ್ಯಾಕಾಂಡಕ್ಕೆ ಬಲಿಯಾದರು. ಈ ಘಟನೆ ಗಾಂಧೀಜಿಯವರನ್ನು ಇನ್ನಿಲ್ಲದಂತೆ ಕಾಡಿತು ಮತ್ತು ಪರಿಣಾಮವಾಗಿ ಅವರ ಚಿಂತನಾ ಧಾಟಿ ಬದಲಾತು. ಅವರು ಸ್ವಾತಂತ್ರ ಚಳವಳಿಯ ಚುಕ್ಕಾಣಿ ಹಿಡಿದುಕೊಂಡರು. ಆ ದಿನದಿಂದ ಅವರು ಇಂಗ್ಲೆಂಡ್ ಸರ್ಕಾರದ ನೇರ ಎದುರಾಳಿಯಾದರು.

ಒಂದು ವರ್ಷದ ಕೆಳಗೆ ಅಖಿಲ ಭಾರತೀಯ ಕಾಂಗ್ರೆಸ್ ಪಕ್ಷವು ಗಾಂಧೀಜಿಯ ಅಹಿಂಸಾ ಚಳವಳಿ ಹಾಗೂ ಅಸಹಕಾರ ಚಳವಳಿಗೆ ಅನುಮೋದನೆ ನೀಡಿತ್ತು. ಕೇವಲ ಮೂರು ತಿಂಗಳ ಹಿಂದೆ, ಅಂದರೆ ಕಳೆದ ಡಿಸೆಂಬರ್ನಲ್ಲಿ ಕಾಂಗ್ರೆಸ್ ಪುನಃ ಈ ಚಳವಳಿಗಳನ್ನು ಮತ್ತಷ್ಟು ಬೆಂಬಲ ಹಾಗೂ ಉತ್ಸಾಹಗಳೊಡನೆ ಕೈಗೆತ್ತಿಕೊಂಡಿತು ಹಾಗೂ ಗಾಂಧೀಜಿಯನ್ನು ತನ್ನ ಸ್ವಾತಂತ್ರ್ಯ ಹೋರಾಟದ ನಾಯಕನೆಂದು ಘೋಷಿಸಿತು. ಈ ವ್ಯಕ್ತಿ ಇಂದು ತನ್ನ ದೇಶದ ಜನಗಳ ಭವಿಷ್ಯವನ್ನು ಅಕ್ಷರಶಃ ತನ್ನ ಕೈಯಲ್ಲಿ ಹಿಡಿದು ಸಾಗುತ್ತಿದ್ದಾರೆ.

ಗಾಂಧಿ ಮಾತನಾಡಿದರೆ ಅದು ಭಾರತ ಮಾತಾಡಿದಂತೆ. ಗಾಂಧಿ ನಡೆಸುವ ಚಟುವಟಿಕೆ, ಅದು ಭಾರತದ ಚಟುವಟಿಕೆ. ಗಾಂಧಿಯನ್ನು ಬಂಧಿಸಿ ಸೆರೆಯಲ್ಲಿಟ್ಟರೆ ಇಡಿಯ ಭಾರತ ತಳಮಳಿಸುತ್ತದೆ ಮತ್ತು ಪ್ರತಿಕ್ರಿಯಿಸುತ್ತದೆ. ಈ ವರೆಗೆ ನಾನು ಬಲ್ಲ ಇನ್ನಾವುದೇ ವ್ಯಕ್ತಿಗಿಂತ ಹೆಚ್ಚು ಈ ಮನುಷ್ಯ ಜನಸಾಮಾನ್ಯರೆಲ್ಲರ ಆತ್ಮಗಳ ವ್ಯಕ್ತಾವತಾರ ಎಂದೇ ನಾನು ನಂಬಿಕೊಳ್ಳುತ್ತೇನೆ.

ಮೂರನೆಯದಾಗಿ, ಗಾಂಧೀಜಿಯ ಚಳವಳಿಗಳು ಇಷ್ಟು ವ್ಯಾಪಕವಾಗಿ ಸುದ್ದಿಯಾಗುವಲ್ಲಿ ಬ್ರಿಟಿಷ್ ಸರ್ಕಾರದ ಕೆಲವು ದಮನಕಾರಿ ನೀತಿಗಳೂ ಕಾರಣವಾಗಿವೆ. ಯಾವುದೇ ಸರ್ಕಾರ ಯಾಕಾದರೂ ದಬ್ಬಾಳಿಕೆ ನಡೆಸಬೇಕು? ಅದು ಕೂಡ ಸ್ವಾತಂತ್ರ್ಯದ ಕೂಗು ಎದ್ದಿರುವ ಸಂದರ್ಭದಲ್ಲಿ ಸರ್ಕಾರಗಳು ಹೆಚ್ಚು ದಬ್ಬಾಳಿಕೆ ನಡೆಸತೊಡಗಿದಷ್ಟೂ ಜನರ ಪ್ರತಿರೋಧ ತೀವ್ರಗೊಳ್ಳುತ್ತ ಹೋಗುವುದು. ಅದ್ಯಾಕೆ ಈ ಸರ್ಕಾರಗಳು ಜನಸಮೂಹದ ಮಾನಸಿಕತೆಯ ಇತಿಹಾಸವನ್ನು ಮರೆಯುತ್ತವೆಯೋ ಅರ್ಥವಾಗೋದಿಲ್ಲ. ತುಳಿದಷ್ಟೂ ಸಮೂಹವು ಚಿಮ್ಮಿ ಬರುತ್ತವೆ ಅನ್ನುವುದನ್ನು ಅವು ಮರೆತುಬಿಡುತ್ತವೆ. ಈಗಾಗಲೇ ಇಂಗ್ಲೆಂಡ್ ಹಲವೆಡೆಗಳಲ್ಲಿ ದಮನಕಾರಿ ನೀತಿಯನ್ನು ಲಾಗೂ ಮಾಡಲು ಹೋಗಿ ವಿಫಲಗೊಂಡಿದೆ. 1775ರಲ್ಲಿ ಇದು ಅಮೆರಿಕದಲ್ಲಿ ವಿಫಲಗೊಂಡಿತು. 20ರ ಹಾಗೂ 40ರ ದಶಕಗಳಲ್ಲಿ ಇದು ಇಂಗ್ಲೆಂಡಿನ ಆಂತರಿಕ ಆಡಳಿತದಲ್ಲಿಯೇ ವಿಫಲವಾಯ್ತು. ಸೌತ್ ಆಫ್ರಿಕಾದಲ್ಲಿಯೂ ಬೋಎರ್/ಯುದ್ಧದ ನಂತರ ವಿಫಲವಾಯ್ತು. ನೆನ್ನೆ ಐರ್ಲೆಂಡಿನಲ್ಲಿ ವಿಫಲಗೊಂಡ ಈ ನೀತಿ ನಾಳೆ ಭಾರತದಲ್ಲೂ ವೈಫಲ್ಯ ಕಾಣುತ್ತದೆ.

ದಮನಕಾರಿ ಪ್ರಭುತ್ವ ಎಲ್ಲಿಯಾದರೂ ಯಶಸ್ಸು ಕಾಣುತ್ತಿದೆ ಎಂದಾದರೆ, ಅದು ಶತ್ರುಗಳ ಹೋರಾಟವನ್ನು ಜಾಹೀರುಗೊಳಿಸುವಲ್ಲಿ, ಅಷ್ಟೇ!

"ನಾವು ನಮ್ಮ ಪ್ರೀತಿಯ ಗೆಳೆಯರಿಂದಾಗಿ ಜಾಹೀರುಗೊಂಡೆವು" ಅನ್ನುತ್ತಾನೆ ಷೇಕ್ಸ್ಪಿಯರ್. ನಾವು ಅದನ್ನೇ ನಮ್ಮ ಶತ್ರುಗಳ ಹೋರಾಟದ ಕುರಿತು ಹೇಳಬೇಕಾಗುತ್ತದೆ. ಇಂಗ್ಲೆಂಡಿನ ನೀತಿಗಳಿಗೆ ಭಾರತೀಯರ ಪ್ರತಿರೋಧವೇ ದೊಡ್ಡ ಸುದ್ದಿಯಾಗಿ, ಆ ಮೂಲಕ ಇಂಗ್ಲೆಂಡು ಜಾಹೀರುಗೊಳ್ಳುತ್ತಿದೆ. ಈ ಮೂಲಕ ಭಾರತೀಯರು ಜಗತ್ತಿನ ಗಮನವನ್ನೂ ಅನುಕಂಪವನ್ನೂ ಸೆಳೆಯತೊಡಗಿದ್ದಾರೆ. ಸ್ವತಃ ಭಾರತೀಯರೇ ಪ್ರಯತ್ನಿಸಿದ್ದರೆ ಇಷ್ಟು ವ್ಯಾಪಕ ಪ್ರಚಾರ ಸಿಗುತ್ತಿತ್ತೋ ಇಲ್ಲವೋ, ಇಂಗ್ಲೆಂಡಿನ ನೀತಿಗಳು ಅಂಥ ವೇದಿಕೆ ಒದಗಿಸಿಕೊಡುತ್ತಿವೆ.

ಇತ್ತೀಚಿನ ಉದಾಹರಣೆಗಳನ್ನೆ ಗಮನಿಸಿ ನೋಡಿ. ಅಲಿ ಸಹೋದರರ ಬಂಧನವಾದಾಗ ಈ ಸುದ್ದಿ ಜಗತ್ತಿನ ಮೂಲೆಮೂಲೆಯಲ್ಲಿರುವ ಮುಸ್ಲಿಂ ದೇಶಗಳನ್ನು ತಲುಪಿತು ಮತ್ತು ಪ್ರತಿಯೊಬ್ಬ ಮುಸ್ಲಿಮನೂ ಭಾರತದ ಸ್ವಾತಂತ್ರ್ಯಕ್ಕಾಗಿ ತುಡಿಯುವಂತೆ ಮಾಡಿತು. ಲಾಲಾ ಲಜಪತರಾಯರನ್ನು ಬಂಧಿಸಿ ಸೆರೆಮನೆಯಲ್ಲಿ ಇರಿಸಿದಾಗ ಸಾವಿರಾರು ಇಂಗ್ಲಿಷ್ ಹಾಗೂ ಅಮೆರಿಕನ್ ಬುದ್ಧಿಜೀವಿಗಳು ಸೆಟೆದು ನಿಂತರು.

ಏಕೆಂದರೆ ಲಜಪತರಾಯರ ಪಾಂಡಿತ್ಯದ ಅರಿವು ಈ ಜನರಿಗಿತ್ತು. ಅವರ ವ್ಯಕ್ತಿತ್ವದ ಬಗ್ಗೆ ಜಗತ್ತು ತಿಳಿದಿತ್ತು.

ಹಾಗೆಯೇ ಇದೀಗ ಗಾಂಧೀಜಿಯ ಸರದಿ. ಇಂದು ಲಕ್ಷಾಂತರ ಜನ ಗಾಂಧೀಜಿಯ ಬಗ್ಗೆ ತಿಳಿದಿದ್ದಾರೆ. ಅವರನ್ನು ನಂಬಿಕೊಂಡಿದ್ದಾರೆ. ನಾಳೆ ಅವರನ್ನು ಆರಾಧಿಸತೊಡಗುತ್ತಾರೆ. ಸಾಮ್ರಾಜ್ಯಷಾಹಿಯ ವಿರುದ್ಧ ಸಂತನೊಬ್ಬ ಜೀವ ಪಣಕ್ಕಿಟ್ಟು ಹೋರಾಟಕ್ಕೆ ಇಳಿದಿದ್ದಾನೆಂದು ಅವರು ಭಾವಿಸುತ್ತಿದ್ದಾರೆ.

ಕೊನೆಯದಾಗಿ, ಇತ್ತೀಚಿನ ದಿನಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನಿಸಲಿಕ್ಕಾಗಿ ನಾನು ಒಂದು ನಿದರ್ಶನವನ್ನು ಹೇಳುತ್ತೇನೆ. ಕೆಲ ತಿಂಗಳುಗಳ ಹಿಂದೆ ವೇಲ್ಸ್ ರಾಜಕುಮಾರ ಭಾರತಕ್ಕೆ ಭೇಟಿ ನೀಡಿದ್ದರು. ಈ ಘಟನೆಗೆ ಹೋಲಿಕೆ ನೀಡಲು ನನಗೇನೂ ತೋಚುತ್ತಿಲ್ಲ. ಬ್ರಿಟಿಷ್ ರಾಜಸತ್ತೆಗೆ ಭಾರತೀಯರೆಷ್ಟು ನಿಷ್ಠರಾಗಿದ್ದಾರೆ ಅನ್ನುವುದನ್ನು ನಿರೂಪಿಸಲು ಈ ಭೇಟಿಯನ್ನು ಆಯೋಜಿಸಲಾಗಿದೆಯೆಂದು ನಮಗೆ ಹೇಳಲಾಗಿತ್ತು. ಹಾಗೇನಾದರೂ ಭಾರತೀಯರು ಬ್ರಿಟಿಷರಿಗೆ ನಿಷ್ಠರಾಗಿದ್ದುದೇ ಆಗಿದ್ದಲ್ಲಿ ರಾಜಕುಮಾರರ ಭೇಟಿಯ ಅಗತ್ಯವೇ ಇರುತ್ತಿರಲಿಲ್ಲ. ಕೆಲವೊಮ್ಮೆ ಸನ್ನಿವೇಶಕ್ಕೆ ತಕ್ಕಂತೆ ಯೋಜಿತ ಕಾರ್ಯಗಳು ವ್ಯತಿರಕ್ತ ಪರಿಣಾಮವನ್ನೆ ಬೀರುತ್ತವೆ.


ವೇಲ್ಸ್ ರಾಜಕುಮಾರನ ಪ್ರಯಾಣದ ಅಧಿಕೃತ ಘೋಷಣೆ ಹೊರಡುತ್ತಲೇ ಗಾಂಧಿ ಭಾರತದಲ್ಲಿ ಬಹಿಷ್ಕಾರ ಚಳವಳಿಗೆ ಕರೆ ನೀಡಿದರು. ಅವರು ಇದನ್ನು ಸಾಮ್ರಾಜ್ಯದ ಮುಗ್ಧ ಯುವ ಪ್ರತಿನಿಧಿಯ ವಿರುದ್ಧವಾಗಿಯೇನೂ ಆಯೋಜಿಸಲಿಲ್ಲ. ಆದರೆ ಇಂಗ್ಲಿಷ್ ಆಡಳಿತಕ್ಕೆ ಭಾರತೀಯರ ಪ್ರತಿಕ್ರಿಯೆಯನ್ನು ದಾಖಲಿಸಲು ಅವರು ಹೋದ ಕಡೆಯಲ್ಲೆಲ್ಲ ಸ್ಥಳೀಯರು ಉಡಾಫೆ ಕಣ್ಣುಗಳಿಂದ ಬರ ಮಾಡಿಕೊಂಡಿದ್ದಲ್ಲದೆ, ಬೆನ್ನು ತಿರುಗಿಸಿ ನಡೆದು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಕೊನೆಯದಾಗಿ ಅಲಹಾಬಾದಿನಲ್ಲಿ ಅವರು ರಾಜಕುಮಾರನನ್ನು ಭೇಟಿಯಾಗಲಿಕ್ಕೆ ಕೂಡ ನಿರಾಕರಿಸಿಬಿಟ್ಟರು. ರಾಜಕುಮಾರ ಈ ನಗರವನ್ನು ಪ್ರವೇಶಿಸಿದಾಗ ಒಮದು ಮೃತ ನಗರವನ್ನು ಪ್ರವೇಶಿಸಿದಂತೆ ಆಗಿತ್ತು. ರಸ್ತೆಗಳು ನಿರ್ಜನವಾಗಿದ್ದವು. ಪ್ರತಿ ಮನೆಯ ಬಾಗಿಲೂ ಮುಚ್ಚಿಕೊಂಡಿದ್ದವು. ಕಿಟಕಿಗಳನ್ನು ಮುಚ್ಚಿ ಪರದೆ ಹಾಕಿಕೊಂಡಿದ್ದರು. ನಗರದ ಹೊರ ವಲಯದಲ್ಲಿ ಒಂದಷ್ಟು ಪ್ರತಿಭಟನಾಕಾರರು ಸ್ವರಾಜ್ಯದ ಘೋಷಣೆ ಕೂಗುತ್ತಿದ್ದರು. ಇಡಿಯ ನಗರ ನಿಶ್ಚಲವಾಗಿ, ನಿರ್ಜೀವವಾದಂತೆ ತೋರುತ್ತಿತ್ತು.

ವೇಲ್ಸ್ ರಾಜಕುಮಾರನ ಭೇಟಿಯ ಸಂದರ್ಭದ ಈ ಪ್ರತಿಭಟನೆಯು ಸ್ವಾತಂತ್ರ್ಯದ ಕುರಿತಾಗಿ ಭಾರತೀಯರ ಚಡಪಡಿಕೆಯನ್ನು ಸ್ಪಷ್ಟವಾಗಿ ಧ್ವನಿಸಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಜಗತ್ತಿಗೆ ಗಾಂಧೀಜಿ ಹಾಗೂ ಅವರ ಅನುಯಾಯಿಗಳ ಸಾಮರ್ಥ್ಯವನ್ನು ಪರಿಚಯಿಸಿತ್ತು.

(ಆಕರ: ಗ್ಲೋಬಲ್ ಇಂಪಾರ್ಟೆನ್ಸ್ ಆಫ್ ಮಹಾತ್ಮಾಗಾಂಧಿ; ಮಿನಿಸ್ಟರ್ ಆಫ್ ದ ಕಮ್ಯುನಿಟಿ ಚರ್ಚ್, ನ್ಯೂಯಾರ್ಕ್ ಸಿಟಿ – ಫ್ರೆಂಡ್ಸ್ ಆಫ್ ಫ್ರಿಡಮ್ ಫಾರ್ ಇಂಡಿಯಾದ ವತಿಯಿಂದ ಪ್ರಕಟಿತ ಕಿರುಹೊತ್ತಿಗೆ..) ಸಂಗ್ರಹ : ರವಿಚಂದ್ರ ಜಂಗಣ್ಣವರ್

ಮಕ್ಕಳಿಗಾಗಿ ಗಾಂಧಿ ಕತೆ



ನನ್ನ ಹೀರೋನ ಹೀರೋ

ಗಾಂಧೀಜಿಯವರು ಅನೇಕರನ್ನು ಪ್ರಭಾವಿಸಿದ ವಿಷಯ ನಿಮಗೆ ತಿಳಿದಿದೆ. ಗಾಂಧೀಜಿಯವರನ್ನು ಪ್ರಭಾವಿಸಿದ್ದು ಯಾರು? ಅದನ್ನು ತಿಳಿಯಲು ಈ ಕಥೆಯನ್ನು ಓದಿ.

ಡಾ। ಕುಮಾರಪ್ಪ ಭಾರತದವರಾದರೂ ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗವನ್ನು ಇಂಗ್ಲೆಂಡ್ ಮತ್ತು ಅಮೇರಿಕಾದಲ್ಲಿ ಪೂರೈಸಿದ್ದರು. ಅವರು ಬರೆದ 'ಆಂಗ್ಲರ ಆಡಳಿತ ಮತ್ತು ಭಾರತದ ಬಡತನ' ಪುಸ್ತಕವನ್ನು ಓದಿದ ಗಾಂಧೀಜಿ ಅವರನ್ನು ಭೇಟಿಯಾದರು. ಮುಂದೆ ಕುಮಾರಪ್ಪ ಗಾಂಧೀಜಿಯವರಿಂದ ಪ್ರಭಾವಿತರಾಗಿ ಸಾಬರಮತಿ ಆಶ್ರಮವನ್ನು ಸೇರಿದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದರು.

ಅವರು ಸರಳ ಜೀವನವನ್ನು ರೂಢಿಸಿಕೊಂಡವರಾಗಿದ್ದು, ತಮಿಳುನಾಡಿನ ಮಧುರೈನಲ್ಲಿರುವ ಒಂದು ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಅವರ ಈ ಗುಡಿಸಲಿನ ಒಳಗೆ ಗೋಡೆಯಲ್ಲಿ ತೂಗುಬಿಟ್ಟ ಚಿತ್ರವೊಂದು ಎಲ್ಲರ ಗಮನ ಸೆಳೆಯುತ್ತಿತ್ತು. ಅದೊಬ್ಬ ಸಾಮಾನ್ಯ ರೈತನ ಚಿತ್ರವಾಗಿತ್ತು. ತಲೆಗೆ ಮುಂಡಾಸು ಕಟ್ಟಿಕೊಂಡ ರೈತನೊಬ್ಬನ ಚಿತ್ರವನ್ನು ಅವರೇಕೆ ಇಟ್ಟುಕೊಂಡಿದ್ದಾರೆ? ಎಂಬುದು ಎಲ್ಲರಿಗೂ ಆಶ್ಚರ್ಯದ ವಿಷಯವಾಗಿತ್ತು.

ಈ ಬಗ್ಗೆ ಪ್ರಶ್ನಿಸಿದಾಗ ಕುಮಾರಪ್ಪ ಹೇಳುತ್ತಿದ್ದರು, "ಅವರು ನನ್ನ ಹಿರೋನ ಹಿರೋ. ಹಾಗಾಗಿ ಅವರ ಫೋಟೋ ಇಟ್ಟುಕೊಂಡಿರುವೆ"


ಕುಮಾರಪ್ಪ ಗಾಂಧೀಜಿಯವರನ್ನು ತನ್ನ ಹೀರೋ ಎಂದು ತಿಳಿದಿದ್ದರು. ಗಾಂಧೀಜಿ ತಮ್ಮನ್ನು ಪ್ರಭಾವಿಸಿದ್ದು ಈ ದೇಶದ ರೈತ ಎಂದು ಹೇಳುತ್ತಿದ್ದುದರಿಂದ ರೈತನೆಂದರೆ ಅವರಿಗೆ ತನ್ನ ಹೀರೋನ ಹೀರೋ ಎಂಬ ಹೆಮ್ಮೆಯಿತ್ತು.

ಗಾಂಧೀಜಿಯವರ ಸರಳತನ ಈ ಎಲ್ಲ ದುಡಿಯುವ ವರ್ಗದ ಜನರಿಂದಲೇ ಬಂದಿತ್ತು.

ಸಂಗ್ರಹ : ಸುಧಾ ಅಡುಕುಳ

1. **https://archive.org/details/HindSwaraj**

The Hind Swaraj collection is a library of materials from India, with an emphasis on the works of Mahatma Gandhi. The collection is maintained by Carl Malamud of Public.Resource.Org.



ವೆಬ್ ಪೋರ್ಟಲ್ ವೀಕ್ಷಣೆಗಾಗಿ ಈ ಕೋಡ್ ಸ್ಕ್ಯಾನ್ ಮಾಡಿ.



KASTURBA'S INFLUENCE ON **GANDHIJI**



The world respects Mahatma Gandhi for his outstanding personality. Kasturba Gandhi was a great woman who contributed immensely in the process of evolution from Mohandas Karamchand Gandhi to Mahatma Gandhi. Kasturba was always supportive of Gandhiji, who turned every moment of his life into a quest for truth.

At the same time she was able to lead a life giving utmost importance for rationality and personal freedom.These qualities made her immortal. The word 'Sahadharmini' means a wife who gives full cooperation to her husband for the good deeds he is performing with a great goal in his mind.

Kasturba was able to convince Gandhi, while they were in South Africa. about the irrationality of forcing someone to render social service even though it was a great virtue. While living in Durban, South Africa, Gandhiji lived together with his lawyer clerks. One of them was a little arrogant. He was not willing to clean his living room on his own and did not even

bother to empty the urinal pot at night and wash it in the morning while everyone else was doing it themselves. Gandhiji took on the task of cleaning the room of the above friend and started washing the urinal. This was intolerable to Kasturba as she found it hard to accept what Gandhiji was doing and requested him not to do it. But Kasturba was not interested in taking over the job. In the later days. there were a lot of arguments between them about this and Gandhiji finally agreed that he should not do this job. With reluctance and great distress, Kasturba Gandhi prepared to wash the clerk's urinal. Gandhiji was angry about this. Gandhiji argued that everything should be done wholeheartedly. Things got to the point where an angry Gandhi kicked Kasturba out of the house. Still in tears, Kasturba pleaded with her husband not to. give up such decency. Kasturba reminded Gandhiji about the inappropriateness of forcing someone else to overdo it, even for the sake of service. The incident was a turning point in the life of Gandhiji, Gandhiji realized his mistake. At the same time Kasturba continued the above mission wholeheartedly.

Gandhiji, who later became a prominent advocate of civil liberities, was inspired by Kasturba's stance to explore the subtleties of individual liberty. From the moment she realized that her husband had accepted the duty of attaining God through non-violent social activities, Kasturba was turning her life into penance and hence literally. she became a ' sahadharamini ' .

Gandhiji launched a strong struggle when the new law on marriage registration was introduced by the South African government, which humiliated the majority of Indians in the country. Gandhiji did not want Kasturba to take part in the agitation. But Kasturba announced that she would not stand alone when everyone in the Phoenix settlement took part in the strike. She took part in the strike and was impriosoned.

Kasturba Gandhi worked hard to develop the Phoenix ashram, which was the first venue for gandhiji's grama swaraj experiments, into a self - sufficient village.

During the Indian national independence struggle, it was announced that Gandhi would address a rally of Shivaji Park in Bombay on the evening of the Quit India strike. Early in the morning. the British police arrested Gandhiji and imprisoned. Kasturba informed the natives that she would address the rally at the same place and time appointed by Gandhiji. Kasturba was also arrested following the incident.

Dring the Non-Cooperation Movement and the people's uprising against the misrule of Rajkot, Kasturba went on strike and was imprisoned without any outside motivation. Gandhiji and his friends sometimes forbade Kasturba from joining the struggle for health reasons. Ignoring them all, Kasturba set out for Swadharma. Kasturba Gandhi, who had been imprisoned several times, died while in prison at the Aga Khan Palace.

Everyone called her Kasturi “Ba”. 'Ba' means mother in Gujarati. She was a beloved mother to the inmates of the ashram, to those who led the national freedom struggle, and to the rural people. The presence of this mother was the main factor that attracted so many women to the Indian Independence movement.

It was Kasturba Gandhi's solidarity that helped Mahatma Gandhi to develop and win a popular freedom movement through non-violence along with a huge participation of women like never before in history.

Kasturba was a constant companion in Gandhiji's difficult and complete life journey, giving him attention and comfort. Kasturba's interventions always helped gandhiji, who would occasionally get angry, control his anger and maintain his composure.

Gandhiji understood the greatness of Kasturba better than anyone else. He says, “If I have done anything good or great in my life, it is with the help of Kasturba.

When we honor Gandhiji as the Father of the Nation. if anyone gives the title of Mother of the Nation, it must belong to Kasturba Gandhi.

I Peethambaran M

ನೆನಪಿನ ನೋಟ

ಕರ್ನಾಟಕ ಗಾಂಧಿ ಸ್ಮಾರಕ ಸಂಘದ ನೂತನ ಕಟ್ಟಡವನ್ನು ಅಂದಿನ ರಾಷ್ಟ್ರಪತಿಗಳಾದ ಡಾ. ಎಸ್ ರಾಧಾಕೃಷ್ಣನ್ ಅವರು 1965 ರಲ್ಲಿ ಉದ್ಘಾಟಿಸಿದರು. ಅಂದಿನ ಕಟ್ಟಡದ ಹೊರ ನೋಟ. ಇವತ್ತಿನ ಕುಮಾರಕೃಪಾ ಮುಖ್ಯ ರಸ್ತೆಗೆ ಗಾಂಧಿ ಭವನದ ಮುಖ್ಯ ಪ್ರವೇಶ ದ್ವಾರ ಇರುವುದನ್ನು ಗಮನಿಸ ಬಹುದು.ಈಗ ವಿಪರೀತ ವಾಹನ ಸಂದಣಿಯ ಕಾರಣದಿಂದಾಗಿ ಗಾಂಧಿಭವನದ ಮುಖ್ಯ ಪ್ರವೇಶ ದ್ವಾರವನ್ನು ಪಕ್ಕದ ಸಣ್ಣ ರಸ್ತೆಗೆ ಸ್ಥಳಾಂತರಿಸಲಾಗಿದೆ.








ಕರ್ನಾಟಕ ಗಾಂಧಿ ಭವನವನ್ನು ಎಲ್ಲರ ಕಣ್ಣಿಗೆ ಕಾಣುವಂತೆ ಕಟ್ಟಿದ್ದ ಗಾಂಧಿವಾದಿ ಹೋ ಶ್ರೀನಿವಾಸಯ್ಯ ಅವರ ಪುಣ್ಯ ಸ್ಮರಣೆಯನ್ನು ಏಪ್ರಿಲ್ 6 ರಂದು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದಲ್ಲಿ ಮಾಡಲಾಯಿತು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ಮತ್ತು ಉಪಾಧ್ಯಕ್ಷರಾದ ಜಿ ಬಿ ಶಿವರಾಜ್ ಪುಷ್ಪ ನಮನ ಸಲ್ಲಿಸಿದರು



ಮಧ್ಯಪ್ರದೇಶದ ಇಂದೋರ್ ನಲ್ಲಿರುವ ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನ ಅಧ್ಯಕ್ಷರಾದ ಕರುಣಾಕರ ತ್ರಿವೇದಿಯವರಿಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷರುಗಳಾದ ಎನ್ ಆರ್ ವಿಶುಕುಮಾರ್ ಮತ್ತು ಜಿ ಬಿ ಶಿವರಾಜ್ ಅವರು ಕರ್ನಾಟಕದ ಖ್ಯಾತ ಕಲಾವಿದರಾದ ಎಂ ಎಸ್ ಮೂರ್ತಿ ಅವರು ರಚಿಸಿರುವ ಮಹಾತ್ಮ ಗಾಂಧೀಜಿಯವರ ಚಿತ್ರವನ್ನು ಕೊಡುಗೆಯಾಗಿ ನೀಡಿದರು .

ಪದಬಂಧ-04



ಅ.ನಾ.ಪ್ರಹ್ಲಾದರಾವ್


ಎಡದಿಂದ ಬಲಕ್ಕೆ

1. ಬಾಪೂಜಿಯ ಬಾಲ್ಯದ ಹೆಸರು (5)
6. ಕೃಷ್ಣನ ಗೆಳೆಯ ಸುಧಾಮನ ಊರು ; ಗಾಂಧೀಜಿ ಜನ್ಮಸ್ಥಳ ಪೋರ್ ಬಂದರಿನ ಇನ್ನೊಂದು ಹೆಸರು (5)
8 ಸತ್ಯಾಗ್ರಹದ ಸಮಯದಲ್ಲಿ ಗಾಂಧೀಜಿ ಸೇವಿಸದ ನೀರು (2)
11. ಮೋಹನದಾಸನ ಮಾತೆ ..ಜನ್ಮದಾತೆ (5)
13. ಆಫ್ರಿಕನ್ನರು ಮಾಡಿದ ಕರಿಯರ ನಿಗ್ರಹ (3)
14. ಹಿಂದೂ ಮುಸ್ಲೀಮರ ನಡುವೆ ಗಾಂಧಿ ಬೇಡವೆಂದ ಸೇಡು (3)
15. ಗಾಂಧೀಜಿಯವರನ್ನು ಗುಣಗಾನ ಮಾಡಿ ರಚಿಸಿದ ಪದ್ಯ (3)
17. ಧರ್ಮದ ಮೂಲವನ್ನು ಹೊಂದಿದ ಕರುಣಾಳು (4)
18. ಮುಂಗಾರಿನ ನೀರ ಬಿಂದು (4)

ಮೇಲಿಂದ ಕೆಳಕ್ಕೆ


2. ಬಾಲಕ ಬಾಪೂ ಮನಸ್ಸು ಬದಲಾವಣೆ ಮಾಡಿದ ನಾಟಕ (4)
3. ದೇಶದಲ್ಲಿ ಗಾಂಧಿ ನಿರ್ಮೂಲ ಮಾಡಲು ಬಯಸಿದ ಗುಲಾಮಗಿರಿ (2)
4. ರಾಮನಂತೆಯೇ ಮುಸ್ಲಿಂ ದೇವದೂತರ ಹೆಸರು (3)
5. ಮೋಹನ ದಾಸನ ಕೈ ಹಿಡಿದಾಕೆ (5)
7. ಲಘು ಬಗೆಯಿಂದ ಧಾವಿಸುವುದು (3)
9. ಗಾಂಧೀಜಿ ನಿಕಟ ಸಂಪರ್ಕ ಹೊಂದಿದ್ದ ಅಂದಿನ ಬರೋಡ ನಗರಕ್ಕೆ ಈಗಿನ ಹೆಸರು (4)
10. ಮೋನು ಪಾಪುವಿನ ತಂದೆ (5)
11. ಮರಳಿ ಮತ್ತೆ ಬಂದ ಬಗೆ (3)
12. ಗಾಂಧಿಯವರಿಗೂ ನಡೆದ ಎಳೆಯರ ಮದುವೆ (5)
16. ಗಾಂಧೀಜಿಯವರ ದಿಟ್ಟತನ ನೋಡಿ ಬಿಡಬಹುದಾದ ಹೆದರಿಕೆ (2)

ಉತ್ತರ : ಪದಬಂಧ – 3



ಪದಬಂಧ–4 ರ ಉತ್ತರ ಮುಂದಿನ ಸಂಚಿಕೆಯಲ್ಲಿ.

ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 061

Printed at : CreativeGeekZ, Yadhava College Road, Madhavanagara Bengaluru - 560001 Ph : +91 80 40927049 E-mail : mail@creativegeekz.com